ಅಖಿಲ ಕರ್ನಾಟಕ

# ಶಿಕ್ಷಕ ಸಮಾಚಾರ

ಡಿಸೆಂಬರ್ 2023 ಮಾಸ ಪತ್ರಿಕೆ

ಸಂಪುಟ/Volume : 46
ಸಂಚಿಕೆ/Issue : 03
ಪುಟ/Pages : 12
ಬೆಲೆ/Price : ₹ 15/–

**Akhila Karnataka Shikshaka Samachar | December 2023 | Monthly**

## ಭವಿಷ್ಯದ ಭಾರತಕ್ಕೆ – ನಾರಿ ಶಕ್ತಿ ಸಂಗಮ

### ಭಾರತೀಯ ಚಿಂತನೆಯಲ್ಲಿ ಮತ್ತು ವಿಕಾಸದಲ್ಲಿ ಮಹಿಳೆಯರ ಪಾತ್ರ




A Journal of Karnataka Rajya Madhyamika Shikshaka Sangha (R.)

## ಸಂಪಾದಕೀಯ

ಶಿಕ್ಷಕ ವೃತ್ತಿಯ ಪಾವಿತ್ರ್ಯತೆ ಮತ್ತು ಶ್ರೇಷ್ಠತೆಯನ್ನು ಅರ್ಥಮಾಡಿಕೊಳ್ಳುವ ಮತ್ತು ವೃತ್ತಿ ಬದುಕಿನಲ್ಲಿ ಅಳವಡಿಸಿಕೊಳ್ಳುವ ಮತ್ತು ನೆನಪು ಮಾಡುವ ತಿಂಗಳು ಜನವರಿ. ಪ್ರಪಂಚಕ್ಕೆ ಭಾರತೀಯರ ಅಂತರಾಳವನ್ನು ಪರಿಚಯ ಮಾಡಿದ ವೀರ ಸನ್ಯಾಸಿ ಸ್ವಾಮಿ ವಿವೇಕಾನಂದರು ಜನ್ಮ ತಾಳಿದ್ದು ಜನವರಿ 12. ಹಾಗೆ ಭಾರತೀಯರು ಮುಂದಿಟ್ಟ ಹೆಜ್ಜೆಯನ್ನು ಹಿಂದಿಡರು, ಬ್ರಿಟೀಷರಿಗೆ ಏಟಿಗೆ ಎದುರೇಟು ನೀಡುವುದೇ ನಮ್ಮ ಗುಣ ಎನ್ನುವುದನ್ನು ತೋರಿಸಿದ ದೇಶಭಕ್ತ ನೇತಾಜಿ ಸುಭಾಷ್ ಚಂದ್ರ ಬೋಸರ ಜನ್ಮದಿನ ಜನವರಿ –23. ಈ ಜನವರಿ 12 ರಿಂದ 23ರವರೆಗೆ ಮಾಧ್ಯಮಿಕ ಶಿಕ್ಷಕ ಸಂಘವು ಸಂಕಲ್ಪ ದಿನಾಚರಣೆಯನ್ನು ಪ್ರತಿ ವರ್ಷವು ಆಚರಿಸುತ್ತದೆ.

ಈ ಸಂದರ್ಭದಲ್ಲಿ ಶಿಕ್ಷಕ ಸಮುದಾಯಕ್ಕೆ ಶಿಕ್ಷಕ ಗುರುವಾಗುವುದು ಹೇಗೆ ಮತ್ತು ತನ್ನ ವೃತ್ತಿಯ ಘನತೆ ಹೆಚ್ಚಿಸಲು ತಾನು ಹೇಗಿರಬೇಕು ಎನ್ನುವುದನ್ನು ನೆನಪಿಸುವ ಕಾರ್ಯವನ್ನು ಮಾಡುತ್ತದೆ. ಗುರು ಶ್ರೇಷ್ಠರನ್ನು ನೆನಪಿಸಿಕೊಳ್ಳುವ ಮತ್ತು ಪವಿತ್ರತೆಯ ಮಾರ್ಗವನ್ನು ಅನುಸರಿಸುವ ಸಮಯವಿದು.ಹಾಗಾಗಿ ಮಾಧ್ಯಮಿಕ ಶಿಕ್ಷಕ ಸಂಘದ ಕಾರ್ಯಕರ್ತರು ಎಲ್ಲಾ ಜಿಲ್ಲೆಗಳಲ್ಲಿ ಈ "ಸಂಕಲ್ಪ ದಿನಾಚರಣೆ"ಯನ್ನು ಯಶಸ್ವಿಯಾಗಿ ಆಚರಿಸುವಂತಾಗಲಿ.

ಭಾರತದ ಅಖಂಡತೆಯನ್ನು ಮತ್ತು ಏಕತೆಯನ್ನು ಸಾರಲು 370 ಆರ್ಟಿಕಲ್‌ಅನ್ನು ಭಾರತದ ಪಾರ್ಲಿಮೆಂಟ್ ರದ್ದು ಪಡಿಸಿರುವ ಕ್ರಮವನ್ನು ಭಾರತದ ಘನ ಸರ್ವೋಚ್ಛ ನ್ಯಾಯಾಲಯವು ಎತ್ತಿ ಹಿಡಿದಿರುವ ಕ್ರಮವನ್ನು ಮಾಧ್ಯಮಿಕ ಶಿಕ್ಷಕ ಸಂಘವು ಸ್ವಾಗತಿಸುತ್ತದೆ.

ದೇಶದ ಘನತೆಯನ್ನು ಹೆಚ್ಚಿಸುವ ದೃಷ್ಟಿಯಿಂದ ಕೈಗೊಳ್ಳುವ ಕಾರ್ಯಗಳಿಗೆ ಶಿಕ್ಷಕ ಸಮುದಾಯ ಮುಂಚೂಣಿಯಲ್ಲಿ ಇರಬಯಸುತ್ತದೆ. ಕಳೆದ ಎರಡು ಮೂರು ವರ್ಷಗಳಲ್ಲಿ ಜಮ್ಮು ಕಾಶ್ಮೀರದ ಸ್ಥಿತಿ ನಾಗರೀಕ ಜೀವನಕ್ಕೆ ಪೂರಕವಾಗಿರುವುದು ಮತ್ತು ಅಲ್ಲಿನ ನಾಗರಿಕರು ಶಾಂತಿ ಸಹಬಾಳ್ವೆಯಿಂದ ಬದುಕು ಸಾಗಿಸುತ್ತಿರುವುದು ಹಾಗೂ ಅಲ್ಲಿ ಅಭಿವೃದ್ಧಿ ಕಾರ್ಯಗಳು ಪ್ರಗತಿಯಲ್ಲಿರುವುದು ನಮಗೆಲ್ಲ ನೆಮ್ಮದಿಯ ವಿಷಯ.

ಕರ್ನಾಟಕದಲ್ಲಿ ಈ ವರ್ಷ 10 ನೇ ತರಗತಿ ಮತ್ತು ಪಿಯುಸಿ ದ್ವಿತೀಯ ವರ್ಷದ ವಿದ್ಯಾರ್ಥಿಗಳಿಗೆ ಪಬ್ಲಿಕ್ ಪರೀಕ್ಷೆಗಳನ್ನು 3 ಬಾರಿ ನಡೆಸಲು ಇಲಾಖೆ ಯೋಚಿಸಿ, ಸಿದ್ಧತೆ ನಡೆದಿರುವ ಸಂದರ್ಭದಲ್ಲಿ ಶಿಕ್ಷಕರಾದ ನಾವು ನಮ್ಮ ಮಾನಸಿಕತೆಯ ಬದಲಾವಣೆಯಲ್ಲಿರುವ ಸಂಕ್ರಮಣದ ಪರ್ವ ಕಾಲವು ಹೌದು ಅಲ್ಲವೆ?

ಸಂಪಾದಕ


## ಸಂಪಾದಕ ಮಂಡಳಿ

ಗೌರವ ಸಂಪಾದಕರು
ಹೆಚ್. ನಾಗಭೂಷಣರಾವ್

ಪ್ರಧಾನ ಸಂಪಾದಕರು ಮತ್ತು ಪ್ರಕಾಶಕರು
ಜೆ. ಎಮ್. ಜೋಶಿ

ವ್ಯವಸ್ಥಾಪಕ ಸಂಪಾದಕರು
ಸಂದೀಪ ಬೂದಿಹಾಳ

ಗೌರವ ಸಲಹೆಗಾರರು
ಚಿದಾನಂದ ಆ. ಪಾಟೀಲ
ಮಮತಾ ಡಿ. ಕೆ.

ಸಂಪಾದಕ ಮಂಡಳಿ
ಎನ್. ನಾಗರಾಜ್
ನಂ. ನಾಗಲಕ್ಷ್ಮಿ
ಸೀತಾಲಕ್ಷ್ಮಿ ಆರ್.

ವಿನ್ಯಾಸಕಾರರು
ಪ್ರೇರಣಾ

ಕಛೇರಿ ವ್ಯವಸ್ಥಾಪಕರು
ವರಲಕ್ಷ್ಮಿ ಕೆ. ಎನ್.


## ಪರಿವಿಡಿ


- ನಮ್ಮ ಹೊಸವರ್ಷ ಯಾವುದು? 3
- ಕರ್ನಾಟಕ ಏಕೀಕರಣದ ಇತಿಹಾಸ 5
- ನಾರೀ ಶಕ್ತಿ ಅಮರ್ ರಹೇ 7
- ಭಾರತದ ಮುಕುಟಮಣಿ ಕಾಶ್ಮೀರ ತುಂಡಾದ ಕಥೆ 8
- ಸರ್ಕಾರದ ಸುತ್ತೋಲೆ 9
- ಎನ್‌ಇಪಿ ಸಹಿ ಸಂಗ್ರಹ ಅಭಿಯಾನ 11
- ಸುದ್ದಿ ಚಿತ್ರಗಳು 12



# ನಮ್ಮ ಹೊಸವರ್ಷ ಯಾವುದು?

**ಹೆಚ್. ನಾಗಭೂಷಣ್ ರಾವ್**
**ಪೋಷಕರು**
**ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ**



ಆತ್ಮೀಯ ಶಿಕ್ಷಕ ಬಂಧುಗಳೇ ನಮಸ್ಕಾರ.

ನಿಮಗೊಂದು ಪತ್ರ ಬರೆಯಬೇಕೆಂದು ಬಹಳ ದಿನಗಳಿಂದ ಅನಿಸುತ್ತಿತ್ತು. ಯಾವ ವಿಷಯ ಕುರಿತು ಬರೆಯಲಿ ಎಂದು ಹೊಳೆದಿರಲಿಲ್ಲ. ಗೆಳೆಯರೊಬ್ಬರು ನೆನ್ನೆ ಚರವಾಣಿಯಲ್ಲಿ ಕರೆಮಾಡಿ "ಮುಂಬರುವ ಜನವರಿ ಒಂದನ್ನು ಬಿಡುವಾಗಿ ಇಟ್ಟುಕೊಳ್ಳಿ, ಅಂದು ನಾವು ಐದಾರು ಗೆಳೆಯರು ಒಟ್ಟಿಗೆ ಸೇರೋಣ. ಹೊಸ ವರ್ಷವನ್ನು ಸ್ವಾಗತಿಸಿ ಸಂಭ್ರಮಿಸೋಣ." ಎಂದರು. ಅವರ ಈ ಆಹ್ವಾನ ನನ್ನನ್ನು ಯೋಚಿಸುವಂತೆ ಮಾಡಿತು. ನಾನು ಬರೆಯಬೇಕೆಂದು ಅಂದುಕೊಂಡ ಪತ್ರಕ್ಕೆ ವಿಷಯದ ಗ್ರಾಸವೂ ಸಿಕ್ಕಿತು.

12 ತಿಂಗಳು, 365 ದಿನಗಳಿರುವ ವರ್ಷದಲ್ಲಿ ಎರಡು ಹೊಸವರ್ಷಗಳು ಪ್ರಾರಂಭವಾಗುವುದು ಹೇಗೆ ಸಾಧ್ಯ? ಜನವರಿ 1 ರಂದು ಹೊಸವರ್ಷದ ಪ್ರಾರಂಭವೆಂದು ಭಾವಿಸಿದರೆ ಅದನ್ನು ಆಚರಿಸುವ ರೀತಿ ಹೇಗಿರುತ್ತದೆ ಎನ್ನುವುದಕ್ಕೆ 30 ವರ್ಷಗಳ ಹಿಂದಿನ ನನ್ನದೊಂದು ಜೀವನಾನುಭವ ತಿಳಿಸುತ್ತೇನೆ. ಅಂದು ಡಿಸೆಂಬರ್ 31, ನನ್ನ ಪಕ್ಕದ ಮನೆಯ ಗೃಹಸ್ಥನಿಗೆ ಹೃದಯಾಘಾತವಾಯ್ತು. ನನಗೆ ಅವರ ಮನೆಯಿಂದ ಅಳುತ್ತಿರುವ ಸದ್ದು ಕೇಳಿಸಿತು. ಕೂಡಲೇ ಕಾಂಪೌಂಡ್ ಗೋಡೆ ಹಾರಿ ಅವರ ಮನೆಗೆ ತೆರಳಿ ಸಮಾಧಾನ ಪಡಿಸಿ, ನಮ್ಮ ಮನೆಗೆ ಹತ್ತಿರದಲ್ಲೇ ಇದ್ದ ವೈದ್ಯಕೀಯ ವಿದ್ಯಾಭ್ಯಾಸ ಮಾಡುತ್ತಿದ್ದ ನನ್ನ ವಿದ್ಯಾರ್ಥಿ ಪ್ರತಾಪನನ್ನ ಕರೆದುತಂದು, ಪ್ರಥಮ ಚಿಕಿತ್ಸೆ ಕೊಡಿಸಿ, ಅವನೊಂದಿಗೆ ಆ ಗೃಹಸ್ಥನನ್ನು ವಿಕ್ಟೋರಿಯಾ ಆಸ್ಪತ್ರೆಗೆ ಕಳುಹಿಸಿದೆ. ರಾತ್ರಿ ಹತ್ತೂವರೆ ಆದರೂ ಪ್ರತಾಪ ಹಿಂದಿರುಗಲಿಲ್ಲ. ಅವರ ಅಮ್ಮ ಗಾಬರಿಯಿಂದ ದೂರವಾಣಿಗೆ ಕರೆ ಮಾಡಿದರು ಕೂಡಲೇ ನಾನು ಸ್ಕೂಟರ್ ಹತ್ತಿ ಆಸ್ಪತ್ರೆಯ ಕಡೆ ಹೊರಟೆನು. ಮನಸ್ಸಿನಲ್ಲಿ ದುಗುಡ, ಆತಂಕ. ಕೆ.ಆರ್ ರಸ್ತೆಯಲ್ಲಿರುವ ಕಿಮ್ಸ್ ಆಸ್ಪತ್ರೆಯ ಬಳಿ 25–30 ಜನ ತರುಣರ ಗುಂಪು ನನ್ನನ್ನು ತಡೆದರು. ಅವರೆಲ್ಲರ ಕೈಯಲ್ಲಿ ಮದ್ಯದ ಬಾಟಲಿಗಳು. ಎಲ್ಲರೂ ಕುಡಿದು ಕೇಕೆ ಹಾಕುತ್ತಾ ನೃತ್ಯ ಮಾಡುತ್ತಿದ್ದಾರೆ. ನನ್ನ ಪರಿಸ್ಥಿತಿ ವಿವರಿಸಿದೆ. ಇಲ್ಲ, ನೀವು ಹೋಗುವಂತಿಲ್ಲ. ನಮ್ಮೊಂದಿಗೆ ಹೊಸವರ್ಷಕ್ಕೆ ಸ್ವಾಗತ ಕೋರುವ ಸಂಭ್ರಮದಲ್ಲಿ ಭಾಗವಹಿಸಲೇಬೇಕು" ಎಂದು ಒತ್ತಾಯ ಮಾಡಿ ನನಗೆ ಮದ್ಯ ಕುಡಿಸುವ ಪ್ರಯತ್ನ ಮಾಡಿದರು. ನಾನು ಪ್ರತಿಭಟಿಸಿದಾಗ ತಲೆಗೆ ಅಭಿಷೇಕ ಮಾಡಿದರು. ಆ ಗುಂಪಿನಲ್ಲೂ ಓರ್ವ ಸಭ್ಯನಿದ್ದ. ಅವನು ಆಸ್ಪತ್ರೆಗೆ ಹೋಗಲು ನನ್ನನ್ನು ಬಿಡುಗಡೆಗೊಳಿಸಿದ. ಇದು ನಡೆದ ಕಥೆ. ಅವರೆಲ್ಲರೂ ವೈದ್ಯಕೀಯ ವಿದ್ಯಾರ್ಥಿಗಳು ಎಂಬುದೇ ಆಶ್ಚರ್ಯ!

ಬೆಂಗಳೂರಿನ ಪ್ರಸಿದ್ಧ ಮಹಾತ್ಮಗಾಂಧಿ ರಸ್ತೆ (ಎಂ.ಜಿ ರಸ್ತೆ) ಗೆ ಡಿಸೆಂಬರ್ 31ರಂದು ಬನ್ನಿ ನೂರಾರು ಪೋಲೀಸರ ಕಾವಲಿನಲ್ಲಿ ಹೊಸವರ್ಷದ ಆಚರಣೆಯ ದೃಶ್ಯ ಕಾಣುವಿರಿ. ಎಲ್ಲ ಮದ್ಯ ದಂಗಡಿಗಳಿಗೂ ವಿಶೇಷ ಅಲಂಕಾರ. ಅದರ ಒಳಗಡೆ, ಹೊರಗಡೆ ಜನವೋ ಜನ. ಅದರಲ್ಲೂ ತರುಣ, ತರುಣಿಯರ ಗುಂಪುಗಳು ಮೈ ಮೇಲೆ ಪರಿವೇ ಇಲ್ಲದೆ ವಿಕೃತ ನೃತ್ಯ, ಹುಚ್ಚಾಟ, ಕುಣಿದಾಟ, ರಾತ್ರಿ 12ಕ್ಕೆ ಪಟಾಕಿ ಸಿಡಿಸುವುದು ಕೇಕೆ ಹಾಕುವುದು. ಮುಂಜಾನೆ ವೇಳೆ ಮನೆಯೋ, ಅಪಘಾತ ಮಾಡಿಕೊಂಡು ಆಸ್ಪತ್ರೆಯೋ ಸೇರುವುದು! ಅನೇಕ ಹಿರಿಯರೂ ಈ ಸಂಭ್ರಮದಲ್ಲಿ ಪಾಲ್ಗೊಳ್ಳುವುದನ್ನು ಪತ್ರಿಕೆಯ ಫೋಟೋಗಳಲ್ಲಿ, ಇತ್ತೀಚೆಗೆ ಟಿ.ವಿಯ ಪರದೆಯ ಮೇಲೆ ನೋಡಿರುವೆ, ನೀವೂ ನೋಡಿರಬಹುದು. ಇದು ಪಾಶ್ಚಾತ್ತೀಕರಣ, ಕ್ರಮೇಣ ನಮ್ಮೊಳಗೆ ಪ್ರವೇಶ ಮಾಡುತ್ತಿರುವುದರ ಸಂಕೇತ.

## ಜನವರಿ 1 ರಿಂದ ವರ್ಷಾರಂಭದ ಪದ್ಧತಿ ಬಂದಿದ್ದಾದರೂ ಹೇಗೆ? ಎಲ್ಲಿಂದ?

ಪ್ರಾಚೀನ ರೋಮನ್ ಸಾಮ್ರಾಜ್ಯದಲ್ಲಿ ವರ್ಷವು ಪ್ರಾರಂಭ ವಾಗುತ್ತಿದ್ದುದು ಮಾರ್ಚ್ ತಿಂಗಳ 25ರಿಂದ ಹಾಗೂ ವರ್ಷದಲ್ಲಿ ಇದ್ದುದ್ದೇ ಹತ್ತು ತಿಂಗಳು. ರೋಮನ್ ದೇವತೆಗಳ ಹೆಸರಿನಲ್ಲಿ ಮಾರ್ಚ್, ಏಪ್ರಿಲ್, ಮೇ, ಜೂನ್ ನಂತರದ ತಿಂಗಳುಗಳು 5,6,7,8,9,10 ಎಂದು ಡಿಸೆಂಬರ್‌ವರೆಗೆ. (ಗಮನಿಸಿ ಸೆಪ್ಟಂಬರ್–ಸಪ್ತಮಿ–7, ಅಕ್ಟೋಬರ್–ಅಷ್ಟಮಿ–8, ನವೆಂಬರ್–ನವಮಿ–9, ಡಿಸೆಂಬರ್–ದಶಮಿ–10) ಕ್ರಿ.ಪೂ 154ರಲ್ಲಿ ವರ್ಷಾರಂಭ ಜನವರಿ ಇಂದ ಪ್ರಾರಂಭವಾಯ್ತು. ಕಾರಣ ಎಲ್ಲ ಸಂಗತಿಗಳ ಪ್ರಾರಂಭಕ್ಕೆ 'ಜನಸ್' ಎಂಬ ಅವರ ದೇವತೆ, "ಅಧಿದೇವತೆ" ಆಗಿದ್ದಳು. ಫೆಬ್ರವರಿಯನ್ನು 2ನೇ ತಿಂಗಳಾಗಿ ಸೇರಿಸಿ 12 ತಿಂಗಳಾಯಿತು. 7,8 ನೇ ತಿಂಗಳನ್ನು ಕ್ರಿ.ಪೂ 44ರಲ್ಲಿ ದೊರೆ ಜ್ಯೂಲಿಯಸ್ ಸೀಸರ್ ನ ಹೆಸರಿನಲ್ಲಿ ಜುಲೈ ತದನಂತರದ ದೊರೆ 'ಅಗಸ್ಟಸ್' ಹೆಸರಲ್ಲಿ ಆಗಸ್ಟ್ ಸೇರಿತು. ಇದರ ಇಂದಿನ ಕ್ಯಾಲೆಂಡರ್‌ನ ಸೂಕ್ಷ್ಮ ಇತಿಹಾಸ. ಈ ಎಣಿಕೆಯಲ್ಲಿ ಎಲ್ಲಾದರೂ ವೈಜ್ಞಾನಿಕತೆಯನ್ನು ಕಂಡಿದ್ದೀರಾ? ಇಂದಿಗೂ ತಿಂಗಳುಗಳ ಹೆಸರಿಗೂ, 7,8,9,10 ಎಂಬ ಸಂಖ್ಯೆಗಳಿಗೂ ಸಂಬಂಧವಿಲ್ಲ!

ಪುಟ 4 ಕ್ಕೆ ➤

➢ ಪುಟ 3 ರಿಂದ.....

## ನಮ್ಮ ಹೊಸ ವರ್ಷಾರಂಭ "ಯುಗಾದಿ" ಏಕೆ?

ಹಿಂದುಗಳ ನಂಬಿಕೆಯಂತೆ ಬ್ರಹ್ಮನು ಸೃಷ್ಟಿಯನ್ನು ಪ್ರಾರಂಭಿಸಿದ್ದ ಈ ದಿನದಿಂದ ಅದಕ್ಕಾಗಿ ಯುಗದ ಆದಿ "ಯುಗಾದಿ". ನಮ್ಮ ಹೊಸ ವರ್ಷ ಪ್ರಾರಂಭವಾಗುವುದು ಚೈತ್ರ ಮಾಸದ ಮೊದಲ ದಿನದಿಂದ(ಪಾಡ್ಯ). ಏಕೆಂದರೆ ಹಿಂದೂ ಕ್ಯಾಲೆಂಡರ್ ಪ್ರಕೃತಿಯೊಂದಿಗೆ ಸಮ್ಮಿಳಿತವಾಗಿದೆ ಇಲ್ಲಿ ಯಾವುದೇ ವ್ಯಕ್ತಿಗೆ ಪ್ರಾಮುಖ್ಯತೆ ಇಲ್ಲ.

ಭೂಮಿಯು ಸೂರ್ಯನ ಸುತ್ತ ಸುತ್ತುವ ಆಧಾರದ ಮೇಲೆ ನಮ್ಮ ಕಾಲಗಣನೆ ಆಧಾರಿತವಾಗಿದೆ. ವರ್ಷವನ್ನು ಆರಾರು ತಿಂಗಳುಗಳಾಗಿ ಉತ್ತರಾಯಣ ಮತ್ತು ದಕ್ಷಿಣಾಯನ ಎಂದು ವಿಭಜಿಸಲಾಗಿದೆ. ಭೂಮಧ್ಯೆ ರೇಖೆಯಿಂದ ಉತ್ತರಕ್ಕೆ ಸೂರ್ಯ ಚಲಿಸಿದರೆ ಉತ್ತರಾಯಣ, ದಕ್ಷಿಣಕ್ಕೆ ಚಲಿಸುವಾಗ ದಕ್ಷಿಣಾಯನ ಜನವರಿ 15 ರಿಂದ ಜುಲೈ 15ರವರೆಗೆ ಉತ್ತರಾಯಣ. ಆಗ ಬೆಳಕು ಹೆಚ್ಚಾಗುತ್ತಾ ಹೋಗುತ್ತದೆ. ಮತ್ತೆ ಜುಲೈ 16ರಿಂದ ಜನವರಿ 14ರವರಗೆ ದಕ್ಷಿಣಾಯನ. ಆಗ ಕತ್ತಲು ಹೆಚ್ಚಾಗುತ್ತಾ ಹೋಗುತ್ತದೆ.

ಆಯನಗಳನ್ನು ವಸಂತ, ಗ್ರೀಷ್ಮ, ವರ್ಷ ಶರತ್, ಹೇಮಂತ ಮತ್ತು ಶಿಶಿರವೆಂದು 6 ಋತುಗಳಾಗಿ ವಿಂಗಡಿಸಿದೆ. ಪ್ರತಿ ಋತುವಿಗೂ ಎರಡೆರಡು ತಿಂಗಳುಗಳನ್ನು ಈ ಕೆಳಕಂಡಂತೆ ಜೋಡಿಸಿದೆ.

| | |
|---|---|
| ಚೈತ್ರ– ವೈಶಾಖ | ವಸಂತ ಋತು |
| ಜ್ಯೇಷ್ಠ– ಆಷಾಢ | ಗ್ರೀಷ್ಮ ಋತು |
| ಶ್ರಾವಣ– ಭಾದ್ರಪದ | ವರ್ಷ ಋತು |
| ಆಶ್ವಯುಜ –ಕಾರ್ತಿಕ | ಶರದೃತು |
| ಮಾರ್ಗಶಿರ – ಪುಷ್ಯ | ಹೇಮಂತ ಋತು |
| ಮಾಘ – ಫಾಲ್ಗುಣ | ಶಿಶಿರ ಋತು |

## ಚಾಂದ್ರಮಾನ ವರ್ಷ ಎಂದರೇನು?

ಭೂಮಿಯ ಸುತ್ತ ಚಂದ್ರನ ಚಲನೆಯನ್ನು ಆಧರಿಸಿ ವರ್ಷದಲ್ಲಿನ ದಿನಗಳನ್ನು ಲೆಕ್ಕ ಮಾಡುವುದಕ್ಕೆ 'ಚಾಂದ್ರಮಾನ' ಎಂದು ಕರೆಯುತ್ತೇವೆ. ಇದರಂತೆ ಅಮಾವಾಸ್ಯೆಯಿಂದ ಅಮಾವಾಸ್ಯೆಗೆ ಒಂದು ತಿಂಗಳು. ಇಂತ 12 ತಿಂಗಳು ಸೇರಿ ಒಂದು ವರ್ಷ. ಈ ವ್ಯವಸ್ಥೆಯಲ್ಲಿ ವರ್ಷಕ್ಕೆ '354' ದಿನ ಮಾತ್ರ. ಮೂರುವರ್ಷಕ್ಕೊಮ್ಮೆ ಅಧಿಕವಾಗಿ 31 ದಿನ ಸೇರಿಸಿ 1 ತಿಂಗಳು ಹೆಚ್ಚಿಸಿ ಅಧಿಕಮಾಸವೆಂದು ಕರೆಯುತ್ತಾರೆ. ಚಾಂದ್ರಮಾನವನ್ನು ಕರ್ನಾಟಕ, ಆಂಧ್ರ ಮತ್ತು ಮಹಾರಾಷ್ಟ್ರದಲ್ಲಿ ಪರಿಗಣಿಸುತ್ತಾರೆ. ಕರಾವಳಿ ಹಾಗೂ ತಮಿಳುನಾಡಿನಲ್ಲಿ ಸೌರಮಾನವನ್ನು ಆಚರಿಸುತ್ತಾರೆ.

## ಸೌರಮಾನ ವರ್ಷ ಎಂದರೇನು?

ರಾಶಿ ಚಕ್ರದಲ್ಲಿ ಸೂರ್ಯನ ಚಲನೆಯನ್ನು ಆಧರಿಸಿ ವರ್ಷದಲ್ಲಿನ ದಿನಗಳನ್ನು ಲೆಕ್ಕ ಮಾಡುವುದಕ್ಕೆ ಸೌರಮಾನ ಎಂದು ಹೆಸರು. ಸೌರಮಾನ ವರ್ಷದಲ್ಲಿ 365 ದಿನಗಳು ಇರುತ್ತದೆ. ತಮಿಳುನಾಡು, ಕೇರಳ, ಬಂಗಾಲ, ಒರಿಸ್ಸಾ, ಅಸ್ಸಾಂ ಹಾಗೂ ಪಂಜಾಬ್‌ಗಳಲ್ಲಿ ಸೌರಮಾನ ವರ್ಷವನ್ನು ಆಚರಿಸುವ ಪದ್ಧತಿ ಇದೆ.

## ನಮ್ಮ ಯುಗಾದಿಯ ವಿಶೇಷವೇನು?

ನಮ್ಮ ಯುಗಾದಿಯಂದು ಹೊಸವರ್ಷದ ಹುಟ್ಟು ಎಂದು ತಿಳಿದಾಯ್ತು. ಅದರ ವಿಶೇಷವನ್ನು ಗಮನಿಸೋಣ.

ಭಾರತದಲ್ಲಿ ಇಂದಿಗೂ ಇದನ್ನೇ ಎಲ್ಲ ಬಗೆಯ ವ್ಯಾಪಾರ, ವ್ಯವಹಾರಕ್ಕೆ ಬಳಸುತ್ತಿರುವುದು. ಸರ್ಕಾರದ ಗೆಜೆಟ್‌ನಲ್ಲಿ, ಟಿ.ವಿ, ಆಕಾಶವಾಣಿಯ ಸುದ್ದಿ ಪ್ರಸಾರದಲ್ಲಿ ಬಳಸುತ್ತಿರುವುದು ಇದೇ ಕ್ಯಾಲೆಂಡರ್.

## ಪ್ರಕೃತಿಯಾಧಾರಿತ

ಶಿಶಿರ ಮಾಸದಲ್ಲಿ ಪ್ರಕೃತಿಯನ್ನು ಗಮನಿಸಿ. ಗಿಡ, ಮರಗಳು ತಮ್ಮ ಎಲೆಗಳನ್ನು ಉದುರಿಸಿ ವಸಂತದಲ್ಲಿ ಹೊಸ ಎಲೆಗಳು ಚಿಗುರೊಡೆದು ಪ್ರಕೃತಿ ನಳ ನಳಿಸುವುದನ್ನು ಕಾಣುತ್ತೇವೆ. ಕೋಗಿಲೆ ಕಾಂಚಾಣಗಳ ಮಧುರ ಗಾನವನ್ನು ಆಲಿಸುತ್ತೇವೆ. ನವಿಲುಗಳ ಗರಿಬಿಚ್ಚಿ ಕುಣಿಯುವುದನ್ನು ನೋಡುತ್ತೇವೆ. ಈ ದೃಶ್ಯ ಮನಸ್ಸಿಗೆ ಮುದನೀಡುವುದಿಲ್ಲವೇ? ಆದ್ದರಿಂದಲೇ ವಸಂತವನ್ನು ಕವಿ ಬಿ.ಎಂ.ಶ್ರೀಕಂಠಯ್ಯನವರು 'ಋತುಗಳ ರಾಜ' ಎಂದು ಬಣ್ಣಿಸಿರುವುದು. ಇಂಥ ಚೈತ್ರ ಮಾಸದ ಮೊದಲ ದಿನವೇ ನಮ್ಮ ನವ ವರ್ಷಾರಂಭ "ಯುಗಾದಿ".

ಜನವರಿ ತಿಂಗಳು ಬರುವುದು ಶಿಶಿರ ಮಾಸದಲ್ಲಿ ಅಂದರೆ ಚಳಿಗಾಲದಲ್ಲಿ. ಅಂದರೆ ಚಳಿಗಾಲದಲ್ಲಿ ಗಿಡಮರಗಳಲ್ಲಿ ಎಲೆಗಳು ಉದುರುವ ಕಾಲ. ಮನುಷ್ಯರಲ್ಲಿ ಶರೀರ ಮುದುಡುವ ಕಾಲ, ಮೈಯೊಡೆಯುವ ಕಾಲ. ಇಂಥ ಸಮಯದಲ್ಲಿ ಪಾಶ್ಚಾತ್ಯರ ಅಂಧಾನುಕರಣೆ ಮಾಡಿ ಹೊಸವರ್ಷ ಆಚರಿಸುತ್ತೇವೆ. "ನಮ್ಮ ಹೊಸ ವರ್ಷಾಚರಣೆ ಎಂದರೆ ಹಿಗ್ಗುವ ಕಾಲ ಅವರದ್ದು ಕುಗ್ಗುವ ಕಾಲ" ಇದೇ ವ್ಯತ್ಯಾಸ. ಹಾಗಾದರೆ ನಿಜವಾದ ಹೊಸವರ್ಷಾಚರಣೆ ಯಾವಾಗ ಮಾಡಬೇಕೆಂದು ಯೋಚಿಸಿ ನೋಡಿ.

ನಿಜ ಗ್ರಿಗೋರಿಯನ್ ಎಂದು ಕರೆಯುವ ಈಗಿನ ಕ್ಯಾಲೆಂಡರ್ ಅನ್ನು 1582ರಲ್ಲಿ 13ನೇ ಪೋಪ್ ಗ್ರಿಗೋರಿ ಘೋಷಿಸಿದ್ದು. ಬ್ರಿಟಿಷ್ ಆಡಳಿತವಿದ್ದ ಎಲ್ಲ ದೇಶಗಳಲ್ಲಿ ಇದನ್ನೇ ಅನುಸರಿಸುವುದು. ಬ್ರಿಟೀಷ್ ಆಡಳಿತವಿದ್ದ ಭಾರತದಲ್ಲೂ ಇದನ್ನೇ ಎಲ್ಲ ಬಗೆಯ ವ್ಯವಹಾರಕ್ಕೆ ಬಳಸುತ್ತಿರುವುದು. ಸರ್ಕಾರದ ಗೆಜಟ್‌ನಲ್ಲಿ ಟಿ.ವಿ ಆಕಾಶವಾಣಿಯ ಸುದ್ದಿ ಪ್ರಸಾರದಲ್ಲಿ ಬಳಸುತ್ತಿರುವುದು ಇದೇ ಅವೈಜ್ಞಾನಿಕ ಕ್ಯಾಲೆಂಡರ್.

## ಶಿಕ್ಷಕರಾಗಿ ನಮ್ಮ ಪಾತ್ರ

ಇಂದಿಗೂ ಧಾರ್ಮಿಕ ಆಚರಣೆಯಲ್ಲಿ ಬಳಸುತ್ತಿರುವುದು ನಮ್ಮ ಪಂಚಾಂಗ (ನಮ್ಮ ಕ್ಯಾಲೆಂಡರ್) ನಮಗೆ ಸ್ವಾತಂತ್ರ್ಯ ಬಂದು 76 ವರ್ಷಗಳಾಯ್ತು. ಅದರಲ್ಲಿ 'ಸ್ವ' ದ ಬಗ್ಗೆ ನಾವು ನಮ್ಮ ಮುಂದಿನ ಪೀಳಿಗೆಗೆ ಅರಿವುಂಟು ಮಾಡಬಹುದಲ್ಲವೇ? 'ಸ್ವ' ಎಂದರೆ ನಮ್ಮತನ, ನಮ್ಮ ಪರಂಪರೆ, ನಮ್ಮ ಸಂಸ್ಕೃತಿ, ಇದರ ಬಗ್ಗೆ ತಿಳಿಸಿ ಕೊಡುವವರು ಯಾರು? ನಾವೇ ಅಲ್ಲವೇ? ನವ ಭಾರತದ ನಿರ್ಮಾಣ ಎಂದರೆ ಇದೇ ಅಲ್ಲವೇ? ಸ್ವಲ್ಪ ಯೋಚಿಸಿ.

ಪತ್ರ ದೀರ್ಘವಾಯ್ತು. ವಿಷಯವೂ ಅಂಥದ್ದೇ ಇತ್ತು. ಇಲ್ಲಿಗೆ ಕೊನೆಗೊಳಿಸುತ್ತೇನೆ. ನಿಮ್ಮ ಅಭಿಪ್ರಾಯವನ್ನು 9482014280 ಗೆ ಮೆಸೇಜ್ ಮಾಡಿ ಅಥವಾ ಶಿಕ್ಷಕ ಸಮಾಚಾರಕ್ಕೆ ಬರೆಯಿರಿ.

ಧನ್ಯವಾದಗಳು. ತಮ್ಮ ವಿಶ್ವಾಸಿ, **ಎಚ್ಚೆನ್ನಾರ್**

# ಕರ್ನಾಟಕ ಏಕೀಕರಣದ ಇತಿಹಾಸ

**(ನಿಘಂಟು ತಜ್ಞ, ಹಿರಿಯ ಸಾಹಿತಿ, ಶತಾಯುಷಿ ಪ್ರೊ. ಜಿ. ವೆಂಕಟಸುಬ್ಬಯ್ಯನವರ ಲೇಖನದ ಆಯ್ದ ಭಾಗವನ್ನೂ, ಹಾರನಹಳ್ಳಿ ರಾಮಸ್ವಾಮಿಯವರ ಏಕೀಕರಣದ ಕುರಿತಾದ ಪುಸ್ತಕದ ಭಾಗವನ್ನೂ ಒಳಗೊಂಡಿದೆ.)**

ನಂ. ನಾಗಲಕ್ಷ್ಮಿ
ನಿವೃತ್ತ ಕನ್ನಡ ಉಪನ್ಯಾಸಕರು,
ಸರ್ಕಾರಿ ಪ.ಪೂ. ಕಾಲೇಜು,
ಬೆಂಗಳೂರು



(ಹಿಂದಿನ ಸಂಚಿಕೆಯಿಂದ...)

1951 ರ ಜುಲೈ ತಿಂಗಳಲ್ಲಿ ಬೆಂಗಳೂರಿನಲ್ಲಿ ಎ.ಐ.ಸಿ.ಸಿ. ಸಭೆ ನಡೆದಿತ್ತು. ಪುರುಷೋತ್ತಮದಾಸ್ ಟಂಡನ್ ಅಧ್ಯಕ್ಷರಾಗಿದ್ದರು. ಅದೇ ಸಮಯದಲ್ಲಿ ಕರ್ನಾಟಕ ಪ್ರಾಂತ್ಯ ರಚನಾ ಸಮ್ಮೇಳನದ ವ್ಯವಸ್ಥೆ ಮಾಡಲಾಗಿತ್ತು.

ಸ್ವಾಗತ ಸಮಿತಿಯ ಅಧ್ಯಕ್ಷರಾಗಿದ್ದವರು ಆನಂತರಾಮನ್. 1951 ರ ಜುಲೈ 11 ರಂದು ಟಿ. ಸುಬ್ರಹ್ಮಣ್ಯಂ ರ ಅಧ್ಯಕ್ಷತೆಯಲ್ಲಿ ಸಭೆ ನಡೆದಿತ್ತು. ಆಂಧ್ರ ನಾಯಕರಾಗಿದ್ದ ಕಾಳಾ ವೆಂಕಟರಾಯರು ಉದ್ಘಾಟನೆ ಮಾಡಿದ್ದರು. ಆ ಸಮಯದಲ್ಲಿ ರಾಮಸ್ವಾಮಿಯವರು 'ಸಮೃದ್ಧಕರ್ನಾಟಕ' ಎಂಬ ಪುಸ್ತಕವನ್ನು ಪ್ರಕಟಿಸಿ ಅದರಲ್ಲಿ ರಾಜ್ಯರಚನೆ ಆದರೆ ಆಗುವ ಲಾಭ ಕುರಿತು ವಿವರಿಸಿದ್ದರು. ಸಮ್ಮೇಳನದಲ್ಲಿ ಸಾವಿರಾರು ಪ್ರತಿಗಳು ಮಾರಾಟವಾಗಿತ್ತು. ರಾಮಸ್ವಾಮಿಗಳ ಸಂಘಟನಾಶಕ್ತಿ, ಕರ್ತೃತ್ವ ಶಕ್ತಿ ಯಶಸ್ವಿಯಾಗಿ ಫಲನೀಡಿತ್ತು. ಅವರ ಸೋಲರಿಯದ ಮನೋಭಾವ ಹಾಗೆ ಕ್ರಿಯಾಶೀಲವಾಗಿತ್ತು.

1952 ನೇ ಸಾಲಿನ ಚುನಾವಣೆಯಾಗಿ ಕೆ.ಹನುಮಂತಯ್ಯನವರು ಮುಖ್ಯಮಂತ್ರಿಯಾದರು. ಅವರು ಕರ್ನಾಟಕ, ಕನ್ನಡ ಭಾಷೆ ಕುರಿತು ಅಭಿಮಾನ ಹೊಂದಿದ್ದು ನಾಡಿನ ಸಾಹಿತ್ಯ-ಸಂಸ್ಕೃತಿಗಳಿಗೆ ಉತ್ತಮ ಪ್ರೋತ್ಸಾಹ ನೀಡುತ್ತಿದ್ದರು.

ಕೇಂದ್ರದಲ್ಲಿ ಮತ್ತೆ ರಾಜ್ಯ ರಚನೆಯ ಬಗ್ಗೆ ಒತ್ತಾಯ ತರುವ ಉದ್ದೇಶದಿಂದ ಶಾಸಕರು, ಮೈಸೂರು ಕಾಂಗ್ರೆಸ್ ಸದಸ್ಯರು ತಯಾರಿಸಿದ ಮನವಿಗೆ ಬಹುಜನರ ಸಹಿ ಹಾಕಿಸಲಾಯಿತು. ಆಗ ರಾಜ್ಯದ ಅನೇಕ ನಾಯಕರು ರಾಜ್ಯರಚನೆ ಪರ ನಿಲ್ಲುವ ನಿರ್ಧಾರ ತಳೆದರು. ಇದೆಲ್ಲದರ ಹಿಂದೆ ರಾಮಸ್ವಾಮಿಗಳ ಗುಂಪಿನ ಪ್ರಚೋದನೆ ಇದ್ದೇ ಇತ್ತು.

ಆ ಸಂದರ್ಭದಲ್ಲೇ ಆಂಧ್ರ ರಚನೆಗಾಗಿ ಪೊಟ್ಟಿ ಶ್ರೀರಾಮುಲು ಆಮರಣಾಂತ ಉಪವಾಸ ಆರಂಭಿಸಿ ಅಸುನೀಗಿದ್ದರು. ಅದು ಪ್ರಕ್ಷುಬ್ಧ ವಾತಾವರಣ ಮೂಡಿಸಿತ್ತು. ಹಾಗಾಗಿ ಕೂಡಲೇ ಕೇಂದ್ರ ಸರ್ಕಾರ ಆಂಧ್ರ ರಚನೆಗೆ ತಾತ್ವಿಕ ಒಪ್ಪಿಗೆ ನೀಡಬೇಕಾಯಿತು. ಈ ಪರಿಸ್ಥಿತಿಯಲ್ಲಿಯೇ 1953 ನೇ ಜನವರಿಯಲ್ಲಿ ಹೈದರಾಬಾದಿನ ನಾನಾಲ್ ನಗರದಲ್ಲಿ ಅಖಿಲ ಭಾರತ ಕಾಂಗ್ರೆಸ್ ಅಧಿವೇಶನ ನಡೆದದ್ದು.. ಸದಸ್ಯರಾಗಿ ಹೋಗಿದ್ದ ರಾಮಸ್ವಾಮಿಯವರು ತಮ್ಮ ಮಾತಿಂದ ರಾಷ್ಟ್ರನಾಯಕರಿಗೆ ಚುರುಕು ಮುಟ್ಟಿಸಿದ್ದೂ ಆಗಲೇ.. ಹೋರಾಟ ನಿರ್ಣಾಯಕ ಘಟ್ಟ ತಲುಪಿದ್ದೂ ಆಗಲೇ.

ಆಂಧ್ರ ರಾಜ್ಯ ರಚನೆಗೆ ಒಪ್ಪಿಗೆ ಕೊಡುವ ನಿರ್ಣಯ ಮಾರನೆಯ ದಿನ ಚರ್ಚೆಗೆ ಬರುವುದಿತ್ತು. ಹಿಂದಿನ ರಾತ್ರಿ ಕರ್ನಾಟಕದಿಂದ ಹೋಗಿದ್ದವರೆಲ್ಲರೂ ಸಿದ್ಧವೀರಪ್ಪ, ಶ್ರೀಧರ್ ಸೇರಿದಂತೆ ಹನುಮಂತಯ್ಯನವರ ಜೊತೆ ಮಾತುಕತೆ ನಡೆಸಿದ್ದರು. ಆದರೆ ಬಹಿರಂಗ ಬೆಂಬಲ ನೀಡಿದರೆ ತಮ್ಮ ಅಧಿಕಾರ ಚ್ಯುತಿಗೆ ಕಾರಣವಾಗಬಹುದೆಂಬ ಭಯ ಹನುಮಂತಯ್ಯನವರನ್ನು ಅಧೀರರನ್ನಾಗಿ ಮಾಡಿತ್ತು. ಆದರೆ ರಾಮಸ್ವಾಮಿಯವರ ಮಾತು ಅವರ ಭಯವನ್ನು ಓಡಿಸಿತ್ತು. 'ಹನುಮಂತಯ್ಯನವರೇ, ರಾಜ್ಯ ರಚನೆ ಆಗಿಯೇ ಆಗುತ್ತೆ. ಈ ಸಮಯದಲ್ಲಿ ನೀವು ನಾಯಕತ್ವ ವಹಿಸಬೇಕು. ಇತಿಹಾಸದಲ್ಲಿ ನಿಮ್ಮ ಹೆಸರು ಶಾಶ್ವತವಾಗಿ ಉಳಿಯುತ್ತೆ. ನೀವು ಆಧುನಿಕ ವಿದ್ಯಾರಣ್ಯರಾಗುತ್ತೀರಿ'. ಉತ್ಸಾಹ ತುಂಬುವ ಈ ಮಾತು ಕೇಳಿ ಹನುಮಂತಯ್ಯನವರು ಮಾರನೇ ದಿನದ ಅಧಿವೇಶನದಲ್ಲಿ ಮಾತನಾಡಲು ಒಪ್ಪಿದ್ದರು.

ಅಧಿವೇಶನದಲ್ಲಿ ಗೊತ್ತುವಳಿ ಮಂಡಿತವಾಯಿತು. ರಾಮಸ್ವಾಮಿಯವರು ವೇದಿಕೆಗೆ ಹೋಗಿ ನಿರ್ಣಯ ಕುರಿತು ಮಾತನಾಡಬಯಸಿದಾಗ ಪಂಡಿತ ನೆಹರು ಖಂಡತುಂಡವಾಗಿ ನಿರಾಕರಿಸಿದ್ದರು. ಹುಡುಗನೇನು ಮಾತನಾಡಬಲ್ಲ? ಎಂಬ ಧೋರಣೆ ಅವರದಾಗಿತ್ತು. ಅಲ್ಲದೆ ಅವರು ಭಾಷಾವಾರು ಪ್ರಾಂತರಚನೆ ತತ್ತ್ವಕ್ಕೆ ವಿರೋಧಿಯಾಗಿದ್ದರು. ಅನಿವಾರ್ಯವಾಗಿ ಆಂಧ್ರ ರಚನೆಗೆ ಒಪ್ಪಿದ್ದರು.

ರಾಮಸ್ವಾಮಿಗಳಿಗೆ ಹೇಗಾದರೂ ಅಲ್ಲಿ ಮಾತನಾಡಲೇಬೇಕೆಂಬ ಛಲ. ಕೊನೆಗೆ ಪರಿಹಾರ ಹೊಳೆದು, ಮೂಲ ಗೊತ್ತುವಳಿಗೆ, ಆಂಧ್ರದೊಡನೆ ಕರ್ನಾಟಕವೂ ರಚನೆ ಆಗಬೇಕು ಎಂದು ತಿದ್ದುಪಡಿ ಕಳಿಸಿದರು.

ತಿದ್ದುಪಡಿ ಕಳಿಸಿದವರನ್ನು ಕರೆಯಲೇಬೇಕಾದುದರಿಂದ ಮಾತಾಡುವ ಅವಕಾಶ ದೊರಕಿತ್ತು. ಸುಮಾರು ಹದಿನೈದು ಇಪ್ಪತ್ತು ನಿಮಿಷಗಳು ಬಹು ಬಿರುಸಿನಿಂದ ಕರ್ನಾಟಕ ರಾಜ್ಯ ರಚನೆಯ ಅವಶ್ಯಕತೆ ಕುರಿತು ಹೇಳುತ್ತಾ ರಾಷ್ಟ್ರನಾಯಕರ ಕಾರ್ಯವೈಖರಿ ಟೀಕಿಸಿದ್ದರು. 'ನಮ್ಮ ನಾಯಕರು ಸಮಸ್ಯೆ ಬಗೆಹರಿಸುವ ಬದಲು ಮುಂದೆ ಹಾಕುತ್ತಿದ್ದಾರೆ' ಎಂದು ಕಠಿಣವಾಗಿ ಹೇಳಿದ್ದರು.

ಪಂಡಿತ ನೆಹರೂಗೆ ಸಿಟ್ಟೇರಿತ್ತು. 'ಯಾರು ಮುಂದೆ ಹಾಕುತ್ತಿದ್ದಾರೆ? ನೀನು ಅಧಿಕಾರವಿಲ್ಲದೆ ಮಾತಾಡುತ್ತಿದ್ದೀ' ಎಂದು ಗರ್ಜಿಸಿದ್ದರು. ರಾಮಸ್ವಾಮಿಗಳೂ ಅಷ್ಟೇ ಸಿಟ್ಟಿನಿಂದ ವೇದಿಕೆಯ ಮುಂದೆ ಕುಳಿತಿದ್ದ ತುಮಕೂರಿನ ಆರ್.ಎಸ್.ಆರಾಧ್ಯರ ಬಳಿ ಇದ್ದ ಮೈಸೂರು ರಾಜ್ಯದ ಶಾಸಕರು, ಪ್ರಾಂತ ಕಾಂಗ್ರೆಸ್ ಸದಸ್ಯರು, ಬಹುತೇಕ ಜನರ ಸಹಿ

ಪುಟ 6 ಕ್ಕೆ ➤

➢ ಪುಟ 3 ರಿಂದ.....

ಇದ್ದ ಮನವಿಯನ್ನು ಪಡೆದು ನೆಹರೂ ಬಳಿ ಹೋಗಿ ಅಷ್ಟೇ ಬಿರುಸಾಗಿ ಹೇಳಿದ್ದರು, 'ಇದೋ, ಇಲ್ಲಿದೆ, ಅಧಿಕಾರ ನೂರಕ್ಕೆ ಅರವತ್ತರಷ್ಟು ಶಾಸಕರು, ಪ್ರಾಂತ ಕಾಂಗ್ರೆಸ್ ಸಮಿತಿ ಸದಸ್ಯರು ಕರ್ನಾಟಕದ ಪರ ರುಜುಮಾಡಿದ್ದಾರೆ'.

ನಿಜಲಿಂಗಪ್ಪನವರ ಹೊರತಾಗಿ ಮೈಸೂರಿನವರೆಲ್ಲ ಕರ್ನಾಟಕ ರಾಜ್ಯ ರಚನೆಗೆ ವಿರೋಧಿಗಳೆಂದು ಭಾವಿಸಿದ್ದ ನೆಹರೂಗೆ ಗೊಂದಲವಾಗಿತ್ತು. ಎಚ್. ಸಿ. ದಾಸಪ್ಪನವರಿಗೆ ಮಾತನಾಡಲು ಅವಕಾಶ ಸಿಕ್ಕಿದಾಗ ಎಂದಿನ ಸುವರ್ಣ ಮಾಧ್ಯಮ ಹಿಡಿದು ಹಾಗೂ ಹೇಳಬಹುದು, ಹೀಗೂ ಹೇಳಬಹುದು ಎಂಬರ್ಥದಲ್ಲಿ ನಾಲ್ಕು ಮಾತು ಮುಗಿಸಿ ಕುಳಿತಿದ್ದರು. ಹನುಮಂತಯ್ಯನವರನ್ನು ಮಾತಾಡುವಂತೆ ರಾಮಸ್ವಾಮಿಯವರು ಕೇಳಿದಾಗ ಅವರು, 'ನೆಹರು ಕರೆದರೆ ಮಾತನಾಡುತ್ತೇನೆ' ಎಂದಿದ್ದರು. ಮತ್ತೆ ರಾಮಸ್ವಾಮಿಯವರೇ ಮುಂದಾಗಿ ಒಂದು ಚೀಟಿಯಲ್ಲಿ ಮುಖ್ಯಮಂತ್ರಿ ಕೆ. ಹನುಮಂತಯ್ಯನವರು ರಾಜ್ಯ ರಚನೆ ಕುರಿತು ಮಾತಾಡ ಬಯಸುತ್ತಾರೆಂದು ಬರೆದು, ನೆಹರೂಗೆ ಕಳಿಸಿಕೊಟ್ಟರು. ಮೈಸೂರಿನಲ್ಲಿ ಎಲ್ಲನಾಯಕರೂ ರಾಜ್ಯ ರಚನೆಗೆ ವಿರೋಧವಾಗಿಯೇ ಇರುತ್ತಾರೆಂಬ ನಂಬಿಕೆಯಿದ್ದ ನೆಹರೂರಿಂದ ತಕ್ಷಣ ಕರೆಬಂದಿತ್ತು.

ಹನುಮಂತಯ್ಯನವರ ಅಂದಿನ ಭಾಷಣ ಬಹು ಪ್ರಖರವಾಗಿತ್ತೆಂಬುದು ಎಲ್ಲರ ಅಭಿಪ್ರಾಯವಾಗಿತ್ತು. 'ಕರ್ನಾಟಕ ರಾಜ್ಯವಾದರೆ ದೇಶ ಅರಬ್ಬೀ ಸಮುದ್ರದಲ್ಲಿ ಮುಳುಗುತ್ತದೆಯೇ? ಜನರ ಆಸೆ, ಆಕಾಂಕ್ಷೆಗಳಿಗೆ, ಭಾವನೆಗಳಿಗೆ ಬೆಲೆಕೊಡಬೇಕು'. ಈ ಭಾಷಣದ ಪ್ರಭಾವ ರಾಮಸ್ವಾಮಿಗಳಿಗೆ ಅಂದು ಸಂಜೆ ಮೈಸೂರಿನವರಾದ ಲಕ್ಷ್ಮೀನರಸು ಮನೆಯಲ್ಲಿ ನಡೆದ ಟೀಪಾರ್ಟಿಯಲ್ಲಿ ಕಂಡಿತ್ತು. ಅದಕ್ಕೆ ಮೈಸೂರಿನ ಎಲ್ಲ ಸದಸ್ಯರೂ, ನಾಯಕರೂ. ಅಲ್ಲದೆ ಪಂಡಿತ ನೆಹರೂ ಸಹ ಬಂದಿದ್ದರು. ಅವರು ಹನುಮಂತಯ್ಯನವರ ಹೆಗಲ ಮೇಲೆ ಕೈಹಾಕಿ ಬಂದಾಗ ಎದುರಿಗೆ ರಾಮಸ್ವಾಮಿಯವರನ್ನು ಕಂಡು, 'ಈತ ಜವಾಬ್ದಾರಿಯಿಲ್ಲದೆ ಮಾತನಾಡುತ್ತಾನೆಂದು ತಿಳಿದಿದ್ದೆ. ಆದರೆ, ಹನುಮಂತಯ್ಯ, ನಿನ್ನ ಮಾತು ನನ್ನ ನಿಲುವನ್ನು ಬದಲಿಸುವಂತೆ ಮಾಡಿತು', ಎಂದು ಹೇಳಿದ್ದಲ್ಲದೆ, ರಾಮಸ್ವಾಮಿಯವರನ್ನೂ ಬಳಿಗೆ ಕರೆದು ಹೆಗಲ ಮೇಲೆ ಕೈಹಾಕಿ ಆತ್ಮೀಯತೆ ತೋರಿದ್ದರು. ಕರ್ನಾಟಕ ರಾಜ್ಯರಚನೆಯಲ್ಲಿ ರಾಮಸ್ವಾಮಿಯವರ ಪಾತ್ರದ ಮಹತ್ವ ಇದು.

ಬಹುಕಾಲದ ಹಂಬಲ ಈಡೇರಿತೆಂಬ ಸಂತಸದಿಂದ ಹಿಂತಿರುಗಿದರೆ ಮೈಸೂರಿನಲ್ಲಿ ಪರಿಸ್ಥಿತಿ ವಿಪರೀತವಾಗಿತ್ತು. ಮೈಸೂರಿನ ಬಹುತೇಕ ನಾಯಕರೆಲ್ಲ ಸೇರಿ ಹನುಮಂತಯ್ಯನವರನ್ನು ಇಳಿಸಲು ಸಂಚುಮಾಡಿ, ಅವರ ಸಂದೇಹ ನಿಜವಾಗುವಂತಾಗಿತ್ತು. ಆಗ ಮತ್ತೆ ರಾಮಸ್ವಾಮಿಯವರೇ ಮಧ್ಯೆ ಪ್ರವೇಶಮಾಡಿ 'ರಾಜ್ಯ ರಚನೆಗೆ ಬೆಂಬಲ ಕೊಟ್ಟವರನ್ನೇ ಇಳಿಸಿದರೆ ಕೆಲಸ ಕೈಗೂಡುತ್ತದೆಯೇ? ತೊಂದರೆಯಾಗುವುದಿಲ್ಲವೇ?' ಎಂದು ರಾಯಭಾರ ವಹಿಸಬೇಕಾಯಿತು. ನಂತರ ಎಲ್ಲ ಸರಿಯಾಗಿ ಹನುಮಂತಯ್ಯನವರೇ ಮುಖ್ಯಮಂತ್ರಿಯಾಗಿ ಮುಂದುವರೆದಿದ್ದರು.

ಹೈದರಾಬಾದ್ ಅಧಿವೇಶನದ ವಿದ್ಯಮಾನಗಳ ಪರಿಣಾಮವಾಗಿ ನೆಹರು ರಾಜ್ಯ ಪುನರ್ವಿಂಗಡಣಾ ಸಮಿತಿ ನೇಮಿಸಿದರು. ಫಜಲ್ ಆಲಿ ಅಧ್ಯಕ್ಷರು, ಪಂಡಿತ ಹೃದಯನಾಥ ಕುಂಜ್ರು, ಎ.ವಿ.ಪಣಿಕ್ಕರ್ ಸದಸ್ಯರು. ಸಮಿತಿ ರಾಜ್ಯಾದ್ಯಂತ ಪ್ರವಾಸ ಮಾಡಿ ಜನಾಭಿಪ್ರಾಯ ಸಂಗ್ರಹಿಸಿದ್ದರು. ಜೊತೆಗೆ ಕಾಂಗ್ರೆಸ್ ಅಧ್ಯಕ್ಷ ಯು.ಎನ್. ದೇಭರ್ ಪ್ರವಾಸ ಮಾಡಿ ಕೇಂದ್ರಕ್ಕೆ ವರದಿ ಒಪ್ಪಿಸಿದ್ದರು. ಕನ್ನಡ ನಾಡಿನ ಜನರ ಬಯಕೆಯಂತೆ ಕರ್ನಾಟಕ ರಾಜ್ಯ ರಚನೆಗೆ ಒಪ್ಪಿಗೆ ದೊರೆತು 1956 ರ ನವೆಂಬರ್ 1 ರಂದು ಕರ್ನಾಟಕ ರಾಜ್ಯಸ್ಥಾಪನೆಯಾಯಿತು. ಕನ್ನಡಿಗರ ಬಯಕೆ ಈಡೇರಿತ್ತು.

●

## ಓದುಗರ ಸ್ಪಂದನೆ

**'ಕನ್ನಡವೇ ಸತ್ಯ ಕನ್ನಡವೇ ನಿತ್ಯ' ಎಂಬ ಮುಖ್ಯ ಶೀರ್ಷಿಕೆ ಹಾಗೂ ದೀಪಾವಳಿ ಎಲ್ಲರ ಬಾಳಲ್ಲಿ ತರಲಿ ಬೆಳಕು ' ಎಂಬ ಉಪಶೀರ್ಷಿಕೆ ಯೊಂದಿಗೆ ಕಂಗೊಳಿಸುತ್ತಿರುವ ಶಿಕ್ಷಕ ಸಮಾಚಾರ ನವೆಂಬರ್ ಮಾಸಪತ್ರಿಕೆಯಲ್ಲಿ ಕನ್ನಡದ ಇಂದಿನ ಸ್ಥಿತಿಗತಿ, ಕರ್ನಾಟಕ ಏಕೀಕರಣ ಇತಿಹಾಸ, ಸಮಯವೇ ಸಂಪತ್ತು, ದೀಪಾವಳಿಯ ಮಹತ್ವ ಈ ಲೇಖನಗಳು ವಿಶೇಷ ಮಾಹಿತಿಯೊಂದಿಗೆ ಸುಂದರವಾಗಿ ಮೂಡಿ ಬಂದಿವೆ.**

**ಕನಕದಾಸರ ಜೀವನ, ಸಾಹಿತ್ಯ ರಚನೆ ಮತ್ತು ಶೀತಲ್ ದೇವಿಯ ಅಪ್ರತಿಮ ಸಾಧನೆಗಳು ಸಾಧಕರಿಗೆ ಪ್ರೇರಣೆ ನೀಡುವಂತಿವೆ, ಇಂತಹ ಉತ್ತಮ ಲೇಖನಗಳು ಈ ಪತ್ರಿಕೆಯಲ್ಲಿ ಇನ್ನೂ ಹೆಚ್ಚು ಪ್ರಕಟಗೊಳ್ಳಲಿ. ಸರ್ಕಾರ ಹಾಗೂ ಶಿಕ್ಷಣ ಇಲಾಖೆಯ ಆದೇಶ ಪತ್ರಗಳ ಪ್ರಕಟಣೆಗೆ ಆದ್ಯತೆ ಇರಲಿ.**

**ಡಾ|| ವೆಂಕಟರಮಣ ದೇವರು ಭಟ್ಟ, ಕಾರ್ಯದರ್ಶಿಗಳು, ಬೆಂಗಳೂರು ದಕ್ಷಿಣ ಜಿಲ್ಲೆ**

**ನವೆಂಬರ್ 2023ರ ಶಿಕ್ಷಕ ಸಮಾಚಾರದ ಮಾಸಿಕ ಪತ್ರಿಕೆಯ ಮುಖಪುಟವು "ಕನ್ನಡ ರಾಜ್ಯೋತ್ಸವ" ಹಾಗೂ ದೀಪಾವಳಿ ಮಹತ್ವದ ಬಗ್ಗೆ ಲೇಖನ ಜೊತೆಗೆ ಹೆಮ್ಮೆಯ ಕುರಿತು ಮೂಡಿಸಿದ ಛಾಯಾ ಚಿತ್ರವು ಅತಿ ಸುಂದರವಾಗಿದೆ.**

**ನವೆಂಬರ್ ತಿಂಗಳಿಗೆ ಸಂಬಂಧಿಸಿ ಬಹಳಷ್ಟು ಉತ್ತಮ ಲೇಖನಗಳಿಂದ ಪತ್ರಿಕೆ ಮೆರಗುಗೊಂಡಿದೆ. ಪರಿಶ್ರಮಿಸಿದ ಶಿಕ್ಷಕ, ಸಮಾಚಾರದ ಪತ್ರಿಕಾ ಬಳಗಕ್ಕೂ ಹಾಗೂ ಎಲ್ಲ ಲೇಖಕರುಗಳಿಗೆ ನನ್ನ ಹೃತ್ಪೂರ್ವಕ ವಂದನೆಗಳು**

**ಈ ಸಂಚಿಕೆಯಲ್ಲಿನ ಎಲ್ಲ ನುಡಿಮುತ್ತುಗಳು ಕನ್ನಡಿಗರನ್ನು ಬಡಿದೆಬ್ಬಿಸುವಂತೆ ಪ್ರೇರಣೆಯನ್ನು ನೀಡುತ್ತಿವೆ. ಆ ಎಲ್ಲಾ ಸಾಹಿತಿಗಳಿಗೆ ನನ್ನ ಅಭಿವಂದನೆಗಳು.**

**ಶ್ರೀ. ವಿ.ಎನ್ ಗೋಡಖಿಂಡಿ, ನಿವೃತ್ತ ಪ್ರಾಂಶುಪಾಲರು, ರಾಮದುರ್ಗ**

# ನಾರೀ ಶಕ್ತಿ ಅಮರ್ ರಹೇ



**ಆರ್. ಸೀತಾಲಕ್ಷ್ಮಿ**
**ಮಾರ್ಗದರ್ಶಕರು,**
**ಕರ್ನಾಟಕ ರಾಜ್ಯ ಮಾಧ್ಯಮಿಕ**
**ಶಿಕ್ಷಕ ಸಂಘ**

ಸಮಾಜದ ಬಗ್ಗೆ ಕಳಕಳಿ ಇರುವ ಸಹ ಮನಸ್ಕ ಮಹಿಳೆಯರ ಏಕತ್ರೀಕರಣಕ್ಕಾಗಿ ವಿವಿಧ ವೃತ್ತಿಜೀವನ ನಡೆಸುತ್ತಿರುವ ಮಹಿಳೆಯರಿಗೆ ಸಮಾಜಮುಖೀ ದೃಷ್ಟಿಯನ್ನು ನೀಡಲು ಅವರವರ ಆಸಕ್ತಿಗನುಗುಣವಾದ ಸಮಾಜ ಸೇವೆಯ ಅವಕಾಶ ಏರ್ಪಡಿಲು, ಇದೇ ತಿಂಗಳ ನವೆಂಬರ್ 26 ರಂದು "ನಾರಿಶಕ್ತಿ" ಸಮ್ಮೇಳನವನ್ನು ಬಿ.ಎಂ.ಎಸ್ ಇಂಜಿನಿಯರಿಂಗ್ ಕಾಲೇಜಿನಲ್ಲಿ "ಸಮರ್ಥ ಭಾರತ" ವತಿಯಿಂದ ಬೆಂಗಳೂರು ದಕ್ಷಿಣ ವಿಭಾಗ ಮಟ್ಟದ ಮಹಿಳಾ ಸಮ್ಮೇಳನವನ್ನು ಏರ್ಪಡಿಸಲಾಗಿತ್ತು.

ಡಾ॥ ವಿಜಯಲಕ್ಷ್ಮಿ ದೇಶಮಾನೆ ಅಧ್ಯಕ್ಷತೆ, ಡಾ॥ ಗೋಮತಿ ದೇವಿಯವರ ಉಪಾಧ್ಯಕ್ಷತೆಯಲ್ಲಿ "ಭಾರತೀಯ ಚಿಂತನೆಯಲ್ಲಿ ಮಹಿಳೆ" ವಿಚಾರ ಸಂಕಿರಣ ನಡೆಯಿತು.

ಮಹಿಳಾ ಸಮ್ಮೇಳನದ ಉದ್ದೇಶ ಹಾಗೂ ಸಮರ್ಥ ಭಾರತದ ವತಿಯಿಂದ ದೇಶದ ಇತರ ಭಾಗಗಳಲ್ಲಿ ನಡೆದ ಕಾರ್ಯಕ್ರಮದ ವಿವರ ತಮ್ಮ ಪ್ರಾಸ್ತಾವಿಕ ಭಾಷಣದ ಮೂಲಕ ಶ್ರೀಮತಿ ವಸಂತಸ್ವಾಮಿ, ಕರ್ನಾಟಕ ದಕ್ಷಿಣ ಪ್ರಾಂತ ಕಾರ್ಯವಾಹಿಕರವರು ಪ್ರಸ್ತುತ ಪಡಿಸಿದರು.

"ಹನುಮ ಭೀಮರಿಗೆ ಜನುಮವಿತ್ತಿರುವ ಮಾತೆ ಅಬಲೆಯೆಂತು" ಎಂದು ಸುಶ್ರಾವ್ಯ ಕಂಠದಿಂದ ಶ್ರೀಮತಿ ಬಿ.ವಿ ಆರತಿಯವರು ತಮ್ಮ ಸ್ವಾಗತ ಭಾಷಣ ಪ್ರಾರಂಭಿಸಿದರು. ನಾರಿಶಕ್ತಿಗೆ ಕಾರಣ ತಂದೆ ಹಾಗೂ ತಾಯಿ ಇಬ್ಬರಿಂದಲೂ 50% + 50% ಬಂದಿರುವ ಅನುವಂಶೀಯತೆ ಕಾರಣವೆಂದು ತಿಳಿಸಿದರು. ಯಾವುದೇ ಪುರುಷ ಜಗದ್‌ಜಟ್ಟಿಯಾದರೂ ಮಗುವನ್ನು ಹಡೆಯಲಾರ ಅದು ನಾರಿಗೆ ಮಾತ್ರ ಸಾಧ್ಯ. ಮಾತೃತ್ವದ ವಿಶೇಷತೆ ಮಹಿಳೆಗೆ ಜನ್ಮಜಾತವಾಗಿ ಬಂದಿರುವ ಭಗವಂತನ ಅನುಗ್ರಹ. ಸ್ತ್ರೀಯಲ್ಲಿರುವ ಸೃಜನಾತ್ಮಕ ಶಕ್ತಿ, ಪ್ರತಿಭೆ ಎಲ್ಲವೂ ಅವಳ ಮನದಾಳದಿಂದಲೇ ಹೊರಹೊಮ್ಮಬೇಕು. ಇದೇ ಭಾರತೀಯ ಚಿಂತನೆ.

"ಕಾರ್ಯೇಷುದಾಸಿ ಕರಣೇಶು ಮಂತ್ರಿ ಪೂಜ್ಯೇಷು ಮಾತಾ ರೂಪೇಷು ಲಕ್ಷ್ಮಿ ಕ್ಷಮಯಾಧರಿತ್ರಿ ಶಯನೇಷುರಂಭಾ" ಎನ್ನುವಂತೆ ವಿವಿಧ ರೀತಿಯ ಕೆಲಸಗಳನ್ನು ಮಹಿಳೆ ನಿರ್ವಹಿಸಬಲ್ಲಳು. ಮತ್ತೆ ಕೆಲವು ಮಹಿಳೆಯರಿಗೆ ಎಲ್ಲಾ ಕೆಲಸ ನಾವು ಮಾಡಬೇಕಾ? ಎನ್ನುವ ಮನೋಭಾವವಿರುತ್ತದೆ ಈ ರೀತಿಯ ಮನಸ್ಥಿತಿ ಒಳ್ಳೆಯದಲ್ಲ. "ನಾವೇ ಮಾಡಬಲ್ಲೆವು" ಎಂದು ಹೆಮ್ಮೆಯಿಂದ ಮಾಡಿತೋರಿಸಬೇಕೆಂದು ಎಲ್ಲ ಮಹಿಳೆಯರನ್ನು ಹುರಿದುಂಬಿಸಿದರು. ನಮ್ಮ ಸಾಮರ್ಥ್ಯಕ್ಕನುಗುಣವಾಗಿ ಎಲ್ಲವನ್ನೂ ಪಡೆಯಬೇಕು. ಹೊರತಾಗಿ ಬಿಟ್ಟಿ ಭಾಗ್ಯಗಳ ಹಿಂದೆ ದಾಸರಾಗಬಾರದು ಮಾತೃತ್ವದ ಶಕ್ತಿಯನ್ನು ಸದ್ವಿನಿಯೋಗ ಪಡಿಸಿ ಸಂಭ್ರಮಿಸಬೇಕು. ಹೊರತಾಗಿ ಸ್ತ್ರೀವಾದ ಹಾಗೂ ನಕಾರಾತ್ಮಕವಾದ ಮಾತನ್ನು ಆಲಿಸಬಾರದು. ಹೆಣ್ಣು ಮಕ್ಕಳು ಈ ರೀತಿಯ ಸನ್ನಿವೇಶದಿಂದ ದೂರವಿದ್ದರೆ ಶಕ್ತಿರೂಪಿಯಾಗುತ್ತಾಳೆಂದು ತಿಳಿಸಿ ಸ್ವಾಗತ ಭಾಷಣ ಮುಗಿಸಿದರು.

### ಎರಡನೇ ಅವಧಿಯಲ್ಲಿ:–

" ಸ್ಥಾನೀಯ ಮಹಿಳೆಯರ ಸ್ಥಿತಿ, ಸವಾಲುಗಳು ಮತ್ತು ಪರಿಹಾರ"

ಈ ವಿಷಯದ ಬಗ್ಗೆ 3 ತಂಡಗಳಲ್ಲಿ ಚರ್ಚೆ ನಡೆದು ಪರಸ್ಪರ ವಿಚಾರ ಮಂಡನೆ ನಡೆಯಿತು. ಶಾರದಾಶ್ರಮದ ಸನ್ಯಾಸಿನಿ ರಾಮಪ್ರಿಯಾರವರು ನಾರಿಯರಿಗೆ ಅವರ ಸಾಮರ್ಥ್ಯದ ಬಗ್ಗೆ ಕರ್ತವ್ಯದ ಬಗ್ಗೆ ಎಚ್ಚರಿಸಿ ತಿಳುವಳಿಕೆ ನೀಡಿದರು.

ಕಡೆಯದಾಗಿ ಶ್ರೀಮತಿ ಎಸ್. ಆರ್ ಲೀಲಾರವರು "ಆಧುನಿಕ ಭಾರತ ವಿಕಾಸದಲ್ಲಿ ಮಹಿಳೆಯರ ಪಾತ್ರ" ಎನ್ನುವ ಬಗ್ಗೆ ವಿಷಯ ಮಂಡಿಸುತ್ತಾ ಆಧುನಿಕ ಭಾರತದಲ್ಲಷ್ಟೇ ಅಲ್ಲ ಪ್ರಾಚೀನ ಭಾರತದಲ್ಲಿಯೂ ನಮ್ಮ ಪರಂಪರೆ ಉತ್ಕೃಷ್ಟವಾಗಿತ್ತು. ಸ್ತ್ರೀಯರ ಸ್ಥಾನಮಾನ, ಸಮಾಜಮುಖಿಯಾಗಿ ಅವಳು ಮಾಡಿದ ಕೆಲಸ ಅಪಾರ. ಬೃಹತ್ ಸಂಹಿತೆ ಗ್ರಂಥದಲ್ಲಿಯೂ ಇದನ್ನು ತಿಳಿಸಿದ್ದಾರೆ. ಪ್ರಾಚೀನ ಕಾಲದಲ್ಲಿಯೇ ನಳಂದ, ತಕ್ಷಶಿಲಾ ಮೊದಲಾದ ಬೃಹತ್ ವಿಶ್ವವಿದ್ಯಾಲಯ ಪ್ರಾರಂಭವಾದವು.

ವರಾಹಮಿಹಿರ ಎನ್ನುವ ಖಗೋಳಶಾಸ್ತ್ರಜ್ಞ "ಸ್ತ್ರೀಪ್ರಶಂಸಾಧ್ಯಾಯ" ಎಂಬ ಪುಸ್ತಕವನ್ನೇ ಬರೆದಿದ್ದಾನೆ. ಪ್ರಾಚೀನಕಾಲದ ಋಷಿಕೆಯರ ಸಮಾಜಮುಖೀ ಕೊಡುಗೆ ಅಪಾರವಾದದ್ದು. ದಾಳಿಕೋರರಿಂದ ನಮ್ಮ ಪ್ರಾಚೀನ ಪರಂಪರೆಗೆ ಏಟುಬಿದ್ದ ಯಾವುದೇ ಕ್ಷೇತ್ರ ಆರಿಸಿಕೊಂಡರೂ ಕೂಡ ಅದ್ಭುತ ಕೆಲಸ ಮಾಡುವ ಸಾಮರ್ಥ್ಯ ಸ್ತ್ರೀಯರಿಗಿದೆ.

ಆಧುನಿಕ ಭಾರತದ ವಿಕಾಸದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸ್ತ್ರೀಯರ ಕ್ರಿಯಾಶೀಲತೆಯನ್ನು ಗುರುತಿಸಬಹುದು.

ಇತ್ತೀಚಿನವರು ಉದಾ:

1. ಕಮಲ್ ಸೊಹೋನಿ (Bio chemist Scientist)
2. ಎಂ.ಎಸ್.ಸುಬ್ಬಲಕ್ಷ್ಮಿ (Queen of music)
3. ಕಲ್ಪನಾ ಚಾವ್ಲ (Nasa – ಗಗನ ಯಾತ್ರಿ)
4. ಸಾಲುಮರದ ತಿಮ್ಮಕ್ಕ (ವೃಕ್ಷಮಾತೆ–200 ಆಲದಮರ ನೆಡುವಿಕೆ)
5. ಕಿರಣ್‌ಬೇಡಿ (ಮೊದಲ ಐ.ಪಿ.ಎಸ್ ಅಧಿಕಾರಿ)
6. ಕರ್ಣಂಮಲ್ಲೇಶ್ವರಿ (weight lifter)
7. ನೀರಜಾ ಬಾನೋಟ್ (ಪ್ಯಾಲಿಸ್ತೇನ್‌ನಲ್ಲಿ ಬಂಧಿತವಾಗಿದ್ದ 300 ಕ್ಕೂ ಅಧಿಕ ಪ್ರಯಾಣಿಕರಿಗೆ ಪುನರ್ಜೀವನ ನೀಡಿ ಪ್ರಾಣಾರ್ಪಣೆ ಮಾಡಿದ ಧೀರೆ)
8. ಕಮಲಾದೇವಿ ಚಟ್ಟೋಪಾಧ್ಯಾಯ (ಸಮಾಜ ಸುಧಾರಣೆಯಲ್ಲಿ ಪದ್ಮವಿಭೂಷಣ ಪುರಸ್ಕೃತೆ, ಸ್ವಾತಂತ್ರ ಹೋರಾಟಗಾರ್ತಿ
9. ಲಕ್ಷ್ಮೀಬಾಯಿ ನೇವಾಳ್ಕರ್ – ಸ್ವಾತಂತ್ರ ಹೋರಾಟಗಾರ್ತಿ

ಇದಲ್ಲದೆ ಮೋದಿಯುವರ ಕ್ಯಾಬಿನೇಟ್‌ನಲ್ಲಿ 7 ಜನ ಮಹಿಳೆಯರಿದ್ದಾರೆ. ಮೊದಲ ಮಹಿಳಾ ಕುಲಪತಿ ಹಂಸ ಮೆಹತಾರವರು.

ಪುಟ 10 ಕ್ಕೆ ➢

# ಭಾರತದ ಮುಕುಟಮಣಿ ಕಾಶ್ಮೀರ ತುಂಡಾದ ಕಥೆ

ಹೆಚ್. ನಾಗಭೂಷಣ ರಾವ್

1947ರ ಆಗಸ್ಟ್ 15ರ ಸೂರ್ಯೋದಯವಾಯಿತು. ಇಡೀ ಭಾರತ ಸ್ವಾತಂತ್ರ್ಯದ ಗಾಳಿ ಉಸಿರಾಡಲು ಸಂಭ್ರಮಿಸುತ್ತಿತ್ತು. ಕೋಟ್ಯಾಂತರ ಜನ ಕೇಕೆ ಹಾಕಿ ಕುಣಿದು ಕುಪ್ಪಳಿಸುತ್ತಿದ್ದರು. ಆದರೆ ಇತಿಹಾಸದಲ್ಲಿ ಘಟಿಸಬಾರದ ಘಟನೆ ಘಟಿಸಿತ್ತು. ಅಖಂಡ ಭಾರತ ತ್ರಿಖಂಡವಾಗಿತ್ತು. ಭಾರತದ ಎರಡು ಪಕ್ಕೆಗಳಲ್ಲಿ ಪಾಕಿಸ್ತಾನವೆಂಬ ಎರಡು ಮುಳ್ಳುಗಳು ಚುಚ್ಚಿದ್ದವು. ಅಲ್ಲಿನ ಲಕ್ಷಾಂತರ ಹಿಂದುಗಳ ಮಾರಣ ಹೋಮ ನಡೆಯುತ್ತಿತ್ತು. ಮಾತೆಯರ ಮಾನಹರಣ ಸತತವಾಗಿ ನಡೆಯುತ್ತಿತ್ತು. ಅವರೆದುರಿಗೇ ಅವರ ಕಂದಮ್ಮಗಳನ್ನು ಖಡ್ಗದಿಂದ ತುಂಡು ಮಾಡಲಾಗುತ್ತಿತ್ತು.

ಬ್ರಿಟಿಷರು ಅವರ ನೇರ ಆಡಳಿತವಿದ್ದ ಭಾಗವಲ್ಲದೆ ಸಣ್ಣ ಪುಟ್ಟ ಭಾಗಗಳನ್ನು ಆಳುತ್ತಿದ್ದ ರಾಜರುಗಳಿಗೂ ಸ್ವಾತಂತ್ರ್ಯವಿತ್ತರು. ಅಂಥ 565ರಾಜ್ಯಗಳು ಭಾರತದಲ್ಲಿ ಇದ್ದುವು. ಅಂದು ಸರ್ದಾರ್ ಪಟೇಲರ ಪ್ರಯತ್ನದಿಂದ 562 ರಾಜ್ಯಗಳು ಭಾರತದೊಂದಿಗೆ ವಿಲೀನಗೊಂಡವು. ಆದರೆ ದಕ್ಷಿಣದಲ್ಲಿ ಹೈದರಾಬಾದ್‌ನ ನವಾಬ, ಪಶ್ಚಿಮದಲ್ಲಿನ ಜುನಾಗಢದ ನವಾಬ ಹಾಗೂ ಉತ್ತರದ ಕಾಶ್ಮೀರದ ಹಿಂದೂ ರಾಜ ಹರಿಸಿಂಗ್ ವಿಲೀನಗೊಳ್ಳಲು ಒಪ್ಪಲಿಲ್ಲ. ಜನಾಗಡದ ನವಾಬ ಪಟೇಲರ ಬೆದರಿಕೆಯ ಕಾರಣ ಗಂಟು ಮೂಟೆ ಕಟ್ಟಿ ಪಾಕಿಸ್ತಾನಕ್ಕೆ ಓಡಿಹೋದ. ಆದರೆ ಹೈದರಾಬಾದಿನ ನಿಜಾಮ ಮಿರ್ ಓಸ್‌ಮಾನ್ ಆಲಿ ಖಾನ್ ಸರ್ದಾರ್ ಪಟೇಲರ ಪೋಲಿಸ್ ಆ್ಯಕ್ಷನ್ ಕಾರಣ ಭಾರತದೊಂದಿಗೆ ವಿಲೀನಗೊಂಡದ್ದು ಸೆಪ್ಟೆಂಬರ್ 17, 1948ರಂದು!

## ಕಾಶ್ಮೀರದ ಕಥೆ

1947ರಲ್ಲಿ ಕಾಶ್ಮೀರದ ರಾಜ ಹರಿಸಿಂಗನ ಮನಸ್ಸು ಡೋಲಾಯಮಾನವಾಗಿತ್ತು. ಹಿಂದು ರಾಜನಾದ ಅವನಿಗೆ ಪಾಕಿಸ್ತಾನದೊಂದಿಗೆ ಸೇರಲು ಮನಸ್ಸಿರಲಿಲ್ಲ. ಆದರೆ ಭಾರತದ ಪ್ರಧಾನಿ ಪಂಡಿತ್ ನೆಹರು ಕಾಶ್ಮೀರದ ಪಕ್ಕಾ ಜಾತೀಯವಾದಿಯಾದ ಮುಸ್ಲಿಂ ನಾಯಕ ಷೇಕ್‌ಅಬ್ದುಲ್ಲಾನ ಪರಮ ಮಿತ್ರನಾದುದರಿಂದ ನೆಹರೂ ಬಗ್ಗೆ ನಂಬಿಕೆ ಇಲ್ಲ. ಆದುದರಿಂದ ಸ್ವತಂತ್ರನಾಗಿ ಉಳಿಯಲು ನಿರ್ಧರಿಸಿದ. ಪಾಕ್‌ನ ಅಧ್ಯಕ್ಷ ಮಹಮದಾಲಿ ಜಿನ್ನಾ ಹಾಗೂ ಭಾರತದ ಗೌರ್‍ನರ್ ಜನರಲ್ ಮೌಂಟ್‌ಬ್ಯಾಟನ್ ಇಬ್ಬರೂ ಪಾಕಿಸ್ತಾನದೊಂದಿಗೆ ವಿಲೀನಗೊಳ್ಳಲು ಒತ್ತಾಯಿಸುತ್ತಿದ್ದರು.

1947ರ ಆಗಸ್ಟ್‌ನಿಂದಲೇ ಪಾಕ್‌ನ ಪರವಾದ ಮುಸ್ಲಿಂ ಪ್ರಜೆಗಳು ಪಾಕಿಸ್ತಾನ ಸೇರಲು ಒತ್ತಡ ಹಾಕುತ್ತಿದ್ದರು. ಅಪಾರ ಪ್ರಮಾಣದಲ್ಲಿ ಶಸ್ತ್ರಾಸ್ತ್ರಗಳನ್ನು ಕಳ್ಳಸಾಗಾಣಿಕೆಯಿಂದ ಸಂಗ್ರಹಿಸಿ ಆಂತರಿಕ ದುಂಬಿ ನಡೆಸಲು ಪ್ರಾರಂಭಿಸಿದ್ದರು. ರಾಜ ಹರಿಸಿಂಗನಿಗೆ ಅಂದು ಪ್ರಧಾನಿಯಾಗಿದ್ದ ಆರ್.ಸಿ ಕಾಕ್‌ನೂ ಸ್ವತಂತ್ರವಾಗಿದ್ದು ಪರಿಸ್ಥಿತಿಯನ್ನು ನಿಭಾಯಿಸಲು ಸಲಹೆ ನೀಡುತ್ತಿದ್ದನು.

ಇತ್ತ ಸರ್ದಾರ್ ಪಟೇಲರು ಭಾರತದ ಎಲ್ಲ ರಾಜ್ಯಗಳನ್ನು ಭಾರತ ಸರ್ಕಾರದೊಂದಿಗೆ ಸೇರಿಸಿಕೊಳ್ಳಲು ಪ್ರಯತ್ನಿಸುತ್ತಿದ್ದರೆ, ಪಂಡಿತ್ ನೆಹರೂ ಗೆಳೆಯ ಷೇಕ್‌ಅಬ್ದುಲ್ಲಾನ ದೋಸ್ತಿಯ ಕಾರಣ ಕಾಶ್ಮೀರವನ್ನು ಭಾರತದೊಂದಿಗೆ ಸೇರಿಸಿಕೊಳ್ಳವ ಸರ್ದಾರ ಪಟೇಲರ ಪ್ರಯತ್ನಕ್ಕೆ ಅಡ್ಡಗಾಲು ಹಾಕಿ ಅದರ ಜವಾಬ್ದಾರಿಯನ್ನು ತಾನೇ ಹೊತ್ತುಕೊಂಡರು. ಅದು ಮಹಾರಾಜ ಹರಿಸಿಂಗನಿಗೆ ದಿಕ್ಕು ತೋಚದ ದಿನಗಳಾಗಿತ್ತು. ಆಗ ಅವರು ಪ್ರಧಾನಿ ಕಾಕ್‌ನನ್ನು ಬದಲಿಸಿ ಪಟೇಲರಿಗೆ ಹತ್ತಿರವಾಗಿದ್ದ ಮೆಹರ್ ಚಂದ್ ಮಹಾಜನ್‌ರನ್ನು ಪ್ರಧಾನಿಯಾಗಿ ನೇಮಿಸಿಕೊಂಡರು.

1940ರಲ್ಲೇ ಆರ್.ಎಸ್.ಎಸ್‌ನ ಕಾರ್ಯ ಜಮ್ಮು ಕಾಶ್ಮೀರದಲ್ಲಿ ಪ್ರಾರಂಭವಾಗಿತ್ತು. ಜಮ್ಮು ಕಾಶ್ಮೀರದ ಸಂಘ ಪ್ರಚಾರಕರಾಗಿ ಪ್ರೊಫೆಸರ್ ಬಲರಾಜ್ ಮಧೋಕ್‌ರವರು ಜಮ್ಮುವಿನ ಪ್ರಭಾವೀ ಹಿಂದೂ ನಾಯಕರಾಗಿದ್ದ ಪಂಡಿತ್ ಪ್ರೇಮನಾಥ ಡೋಗ್ರಾರವರ ಮಾರ್ಗದರ್ಶನದಲ್ಲಿ ಕೆಲಸ ಮಾಡುತ್ತಿದ್ದರು. ಮಹಾಜನ್‌ರವರಿಗೆ ಮಧೋಕ್‌ರವರೊಂದಿಗೆ ಉತ್ತಮ ಸಂಪರ್ಕವಿತ್ತು. ಮಹಾಜನ್‌ರವರು ಭಾರತ ಅಥವಾ ಪಾಕಿಸ್ತಾನದೊಂದಿಗೆ ವಿಲೀನಗೊಳ್ಳುವ ಬಗ್ಗೆ ಮಹಾರಾಜರಿಗೆ ಒಂದು ವಿಸ್ತೃತ ವರದಿಯನ್ನು ಸಲ್ಲಿಸಿದರು. ಮದೋಕರೂ ಸಂಘದ ಪೂರ್ಣ ಬೆಂಬಲವನ್ನು ಕೊಡುವ ಬಗ್ಗೆ ಮಹಾರಾಜರಿಗೆ ಆಶ್ವಾಸನೆ ನೀಡದರು. ಮಹಾರಾಜರ ಆಸ್ಥಾನಿಕರು, ಮಂತ್ರಿಗಳು ಹಾಗೂ ಪರಿವಾರದವರೂ ಭಾರತದೊಂದಿಗೆ ವಿಲೀನಗೊಳ್ಳುವ ಒತ್ತಡವನ್ನು ಹಾಕಿದರೂ ಸಹ ರಾಜ ಹರಿಸಿಂಗರಿಗೆ ವಿಲೀನಗೊಳಿಸುವ ಮನಸ್ಸಾಗಲಿಲ್ಲ. ಕಾರಣ ಪಂಡಿತ್ ನೆಹರೂರವರ ಅಧಿಕಾರವನ್ನು ಒಪ್ಪಿಕೊಳ್ಳದ ಅವರ ಮನಸ್ಥಿತಿ, ಮತ್ತೊಂದೆಡೆ ಪಾಕಿಸ್ತಾನದ ಸೈನ್ಯ ಕಾಶ್ಮೀರದ ಗಡಿಯತ್ತ ಧಾವಿಸುತ್ತಿದ್ದವು.

ಮಹಾರಾಜರ ಮನವೊಲಿಸುವ ರಾಜಕೀಯ ನಾಯಕರ ಪ್ರಯತ್ನಗಳು ವಿಫಲವಾಗುತ್ತಿದ್ದಂತೆ ಪರಿಸ್ಥಿತಿಯೂ ಜಟಿಲವಾಗಿ ಕೈಮೀರಿ ಹೋಗುತ್ತಿತ್ತು. ಆಗ ಸರ್ದಾರ್ ಪಟೇಲರು ಪ್ರಧಾನಿ ಮೆಹರ್‌ಚಂದ್ ಮಹಾಜನರೊಂದಿಗೆ ಆರ್ ಎಸ್‌ಎಸ್‌ನ ಪ್ರಮುಖರಾಗಿದ್ದ ಎಂ.ಎಸ್ ಗೊಲ್ವಾಲ್ಕರ್ ರಾಜ ಹರಿಸಿಂಗರ ಮನವೊಲಿಸುವಂತೆ ಸಂದೇಶ ಕಳಿಸಿದರು.

'ಗುರೂಜಿ' ಎಂದೇ ಕರೆಸಿಕೊಳ್ಳುತ್ತಿದ್ದ ಎಂ.ಎಸ್ ಗೊಲ್ವಾಲ್ಕರ್‌ರವರು ಕೂಡಲೇ ತಮ್ಮೆಲ್ಲ ಕಾರ್ಯಕ್ರಮಗಳನ್ನು ರದ್ದುಗೊಳಿಸಿ 17–10–1947ರಂದು ನಾಗಪುರದಿಂದ ಶ್ರೀನಗರಕ್ಕೆ ಧಾವಿಸಿದರು. ಪಂಡಿತ್ ಪ್ರೇಮನಾಥ ಡೋಗ್ರಾ ಹಾಗೂ ಪ್ರಧಾನಿ ಮೆಹರ್‌ಚಂದ್ ಮಹಾಜನ್‌ರ ಪ್ರಯತ್ನದ ಫಲವಾಗಿ 18.10.47ರಂದು ಮಹಾರಾಜ ಹರಿಸಿಂಗ್‌ರವರೊಂದಿಗೆ ಗುರೂಜಿಯವರ ಆಪ್ತಸಮಾಲೋಚನೆ ನಡೆಯಿತು. ಗುರೂಜಿಯವರು ಕಾಶ್ಮೀರವನ್ನು ಭಾರತದೊಂದಿಗೆ ವಿಲೀನಗೊಳಿಸುವಂತೆ ಆಗ್ರಹಿಸಿ ಒಪ್ಪಿಸದಿದ್ದರೆ ಆಗುವ ಪರಿಣಾಮವನ್ನು ಮನದಟ್ಟು ಮಾಡಿಸಿ ಮಹಾರಾಜರನ್ನು ಒಪ್ಪಿಸಲು ಸಾಧ್ಯವಾಯಿತು. ಎಂಟು ದಿನಗಳ ನಂತರ ಅಕ್ಟೋಬರ್ 26ರಂದು ಹರಿಸಿಂಗರು ವಿಲೀನಗೊಳಿಸುವ ಪತ್ರಕ್ಕೆ ಸಹಿಮಾಡಿ ದೆಹಲಿಗೆ ರವಾನಿಸಿದರು. ಗುರೂಜಿಯವರು ಸಂಘದ ಸ್ವಯಂಸೇವಕರಿಗೆ ರಾಜರಿಗೆ ಎಲ್ಲ ಬಗೆಯ ಸಹಕಾರವನ್ನು ನೀಡಬೇಕೆಂದು ಆದೇಶಿಸಿ ನಾಗಪುರಕ್ಕೆ ಹಿಂದಿರುಗಿದರು. ಹೀಗೆ ಕಾಶ್ಮೀರ ಭಾರತದೊಂದಿಗೆ ವಿಲೀನಗೊಂಡಿತು. ಎಂದು ಕಾಶ್ಮೀರ, ಭಾರತದೊಳಗೆ ವಿಲೀನವಾಗುವ ಪ್ರಕ್ರಿಯೆ ಪ್ರಾರಂಭವಾಯಿತೋ ಅದಕ್ಕಿಂತ ಮುನ್ನವೇ ಪಾಕೀಸ್ತಾನ ಅದನ್ನು ಕಬಳಿಸುವ ಸಕಲ ಸಿದ್ಧತೆಯನ್ನೂ ಮಾಡಿಕೊಂಡಿತ್ತು.

ಮುಂದುವರೆಯುತ್ತದೆ........

ಕರ್ನಾಟಕ ಸರ್ಕಾರ

## ಶಾಲಾ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ ನೃಪತುಂಗ ರಸ್ತೆ, ಬೆಂಗಳೂರು-1

ಸಂಖ್ಯೆ : ಎಡಿಎಂ2(4)/ಮ.ಸು.ಕ್ರ/01/2023-24 ದಿನಾಂಕ : 01/12/2023

## ಸುತ್ತೋಲೆ

**ವಿಷಯ** :ರಾಜ್ಯದ ಎಲ್ಲಾ ಸರ್ಕಾರಿ, ಅನುದಾನಿತ ಮತ್ತು ಅನುದಾನ ರಹಿತ ಶಾಲೆಗಳಲ್ಲಿ ಸುರಕ್ಷತಾ ಕ್ರಮಗಳನ್ನು ಅನುಸರಿಸುವ ಕುರಿತು

**ಉಲ್ಲೇಖ** :1. ಸರ್ಕಾರದ ಸುತ್ತೋಲೆ ಸಂಖ್ಯೆ ಇಡಿ 116 ಡಿಎಲ್ಆರ್ 2016 ದಿನಾಂಕ:02.08.2023

2) ಈ ಕಛೇರಿ ಸುತ್ತೋಲೆ ಸಂಖ್ಯೆ : ಸಿ4(3) (2): ಆಶಾ:01/2010-11 ದಿನಾಂಕ : 07/02/2013

**********

ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ-1ರನ್ವಯ ರಾಜ್ಯದ ಎಲ್ಲಾ ಸರ್ಕಾರಿ,ಅನುದಾನಿತ ಮತ್ತು ಅನುದಾನರಹಿತ ಶಾಲೆಗಳಲ್ಲಿ ವಿದ್ಯಾರ್ಥಿಗಳನ್ನು ಶೈಕ್ಷಣಿಕ ಚಟುವಟಿಕೆಗಳನ್ನು ಹೊರತುಪಡಿಸಿ ಇನ್ನಿತರೆ ಯಾವುದೇ ಚಟುವಟಿಕೆಗಳಿಗೆ ಬಳಸಿಕೊಳ್ಳುವುದನ್ನು ನಿಷೇಧಿಸಿ ಸುತ್ತೋಲೆ ಹೊರಡಿಸಲಾಗಿರುತ್ತದೆ. ಆದಾಗ್ಯೂ ವಿದ್ಯಾರ್ಥಿಗಳನ್ನು ಶೈಕ್ಷಣಿಕ ಚಟುವಟಿಕೆಗಳನ್ನು ಹೊರತು ಪಡಿಸಿ, ಇತರೆ ಚಟುವಟಿಕೆಗಳಿಗೆ ಇಲಾಖೆ ಅನುಮತಿ ಇಲ್ಲದೆ ಬಳಸಿಕೊಳ್ಳುವುದಕ್ಕೆ ಹಾಗೂ ಅನುಮತಿಸುವುದಕ್ಕೆ ಅವಕಾಶ ನೀಡಬಾರದು ಎಂದು ಸೂಚನೆ ನೀಡುತ್ತಾ, ಶಾಲಾ ವಿದ್ಯಾರ್ಥಿಗಳನ್ನು ಶೈಕ್ಷಣಿಕ ಚಟುವಟಿಕೆಗಳನ್ನು ಹೊರತುಪಡಿಸಿ ಇತರೆ ಯಾವುದೇ ಚಟುವಟಿಕೆಗಳಿಗೆ ಬಳಸಿಕೊಳ್ಳದಂತೆ ಮತ್ತೊಮ್ಮೆ ಈ ಮೂಲಕ ತಿಳಿಸಲಾಗಿದೆ.

ಉಲ್ಲೇಖ-2ರಲ್ಲಿ ಶಾಲಾ ಆವರಣವು ಶಾಲೆಯಲ್ಲಿ ಮಕ್ಕಳಿಗೆ ದೈನಂದಿನ ಪಾಠ ಪ್ರವಚನಗಳೊಂದಿಗೆ ಪಠ್ಯೇತರ ಚಟುವಟಿಕೆಗಳು ಮತ್ತು ಆಟೋಟ ಕಾರ್ಯಕ್ರಮಗಳು, ಶಾರೀರಿಕ ಶಿಕ್ಷಣ ಹಾಗೂ ವ್ಯಾಯಾಮ, ಮತ್ತಿತರ ಶೈಕ್ಷಣಿಕ ಚಟುವಟಿಕೆಗಳಿಗೆ ಮಾತ್ರ ಸದ್ವಿನಿಯೋಗವಾಗಬೇಕು ಎಂಬ ಉದ್ದೇಶದಿಂದ ಶಾಲಾ ಮೈದಾನ/ಆವರಣವನ್ನು ಶೈಕ್ಷಣಿಕೇತರ ಚಟುವಟಿಕೆಗಳಿಗೆ /ಉದ್ದೇಶಗಳಿಗೆ ಸರ್ಕಾರ /ಇಲಾಖೆ ಅನುಮತಿ ಇಲ್ಲದೆ ಬಳಸಬಾರದು ಹಾಗೂ ಅನುಮತಿ ನೀಡಬಾರದು ಎಂದು ತಿಳಿಸಲಾಗಿದ್ದು, ಅದರಂತೆ ಕ್ರಮವಹಿಸಲು ಮತ್ತೊಮ್ಮೆ ಸೂಚಿಸಲಾಗಿದೆ.

ಮುಂದುವರೆದು ಶಾಲೆಗೆ ಸಂಬಂಧವಿರದ ಯಾವುದೇ ವ್ಯಕ್ತಿಗಳು ಶಾಲೆಯ ಆವರಣದಲ್ಲಿ ಅನಗತ್ಯವಾಗಿ ಸುತ್ತಾಡುತ್ತಿರುವುದು ಕಂಡುಬಂದಲ್ಲಿ ಹಾಗೂ ಯಾವುದೇ ವ್ಯಕ್ತಿಗಳಿಂದ ಶಾಲಾ ಸುರಕ್ಷತೆಗೆ ಭಂಗ ತರುವಂತಹ ಅನಾಮಧೇಯ ದೂರವಾಣಿ ಕರೆಗಳು, ಪತ್ರಗಳು ಬಂದಲ್ಲಿ ಅಥವಾ ಶೈಕ್ಷಣಿಕ ಚಟುವಟಿಕೆಗಳಿಗೆ ಅಡ್ಡಿಪಡಿಸಿದಲ್ಲಿ ಸಂಬಂಧಿಸಿದ ಇಲಾಖಾಧಿಕಾರಿಗಳು ಮತ್ತು ಸ್ಥಳೀಯ ಪೋಲೀಸ್ ಅಧಿಕಾರಿಗಳ ಗಮನಕ್ಕೆ ತಂದು ಅಗತ್ಯ ಮುನ್ನೆಚ್ಚರಿಕೆ ಕ್ರಮಗಳನ್ನು ತೆಗೆದುಕೊಳ್ಳುವುದು. ಒಟ್ಟಾರೆ ಶಾಲಾ ಮಕ್ಕಳ ಸುರಕ್ಷತೆಗೆ ಧಕ್ಕೆಯಾಗದಂತೆ ಎಚ್ಚರಿಕೆ ವಹಿಸುವಂತೆ ಎಲ್ಲಾ ಶಾಲಾ ಮುಖ್ಯಸ್ಥರು, ಉಸ್ತುವಾರಿ ಅಧಿಕಾರಿ/ಸಿಬ್ಬಂದಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದೆ.

ಆಯುಕ್ತರು
ಶಾಲಾ ಶಿಕ್ಷಣ ಇಲಾಖೆ

**ಇವರಿಗೆ**

1. ರಾಜ್ಯದ ಎಲ್ಲಾ ಉಪನಿರ್ದೇಶಕರು (ಆಡಳಿತ) ಶಾಲಾ ಶಿಕ್ಷಣ ಇಲಾಖೆ. ರವರಿಗೆ ಅಗತ್ಯ ಕ್ರಮಕ್ಕಾಗಿ
2. ರಾಜ್ಯದ ಎಲ್ಲಾ ಪ್ರಾಂಶುಪಾಲರು,ಡಯಟ್ ಹಾಗೂ ಪದನಿಮಿತ್ತ ಉಪನಿರ್ದೇಶಕರು (ಅಭಿವೃದ್ಧಿ) ಶಾಲಾ ಶಿಕ್ಷಣ ಇಲಾಖೆ. ರವರಿಗೆ ಅಗತ್ಯ ಕ್ರಮಕ್ಕಾಗಿ
3. ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು ಶಾಲಾ ಶಿಕ್ಷಣ ಇಲಾಖೆ ರವರಿಗೆ ಅಗತ್ಯ ಕ್ರಮಕ್ಕಾಗಿ
4. ರಾಜ್ಯದ ಎಲ್ಲಾ ಸರ್ಕಾರಿ,ಅನುದಾನಿತ,ಅನುದಾನ ರಹಿತ ಶಾಲೆಗಳ ಮುಖ್ಯ ಶಿಕ್ಷಕರುಗಳಿಗೆ ಅಗತ್ಯ ಕ್ರಮ್ಮಕಾಗಿ

**ಪ್ರತಿಯನ್ನು**

1. ಅಪರ ಆಯುಕ್ತರು ಸಾರ್ವಜನಿಕ ಶಿಕ್ಷಣ ಇಲಾಖೆ ಧಾರವಾಡ /ಕಲಬುರಗಿ.
2. ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ಜಿಲ್ಲಾ ನೋಡಲ್ ಅಧಿಕಾರಿಗಳಿಗೆ.
3.ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ವಿಭಾಗೀಯ ಸಹ ನಿರ್ದೇಶಕರುಗಳಿಗೆ.
4. ಸಹ ನಿರ್ದೇಶಕರು(ಶಾಲಾ ಶಿಕ್ಷಣ),ಆಯುಕ್ತರ ಕಛೇರಿ ಬೆಂಗಳೂರು.
5.ಕಛೇರಿ ಪ್ರತಿ

➢ ಪುಟ 7 ರಿಂದ.....

ಇದಲ್ಲದೆ ಆಡಳಿತ ಕ್ಷೇತ್ರದಲ್ಲಿ ಅನೇಕ ಮಹಿಳೆಯರು ಅಚ್ಚುಕಟ್ಟಾಗಿ ಕೆಲಸ ನಿರ್ವಹಿಸುತ್ತಿದ್ದಾರೆ. (multi tasking ability) ಎಲ್ಲ ಕ್ಷೇತ್ರದಲ್ಲಿಯೂ ಅದ್ಭುತ ಕೆಲಸ ನಿರ್ವಹಿಸುವ ಸಾಮರ್ಥ್ಯ ಮಹಿಳೆಗೆ ಇದೆ ಎಂದು ವರಾಹ ಮಿಹಿರಾ ಕೂಡ ತಿಳಿಸಿದ್ದಾರೆ. "ಸ್ತ್ರೀ represents ಅಗ್ನಿ" ಎನ್ನುವರು. ಎಷ್ಟೇ ರೀತಿಯ ಸಮಸ್ಯೆ ಅಡ್ಡಿ ಆತಂಕಗಳು ಬಂದಾಗ್ಯೂ ಅವುಗಳನ್ನು ಪರಿಹರಿಸಿಕೊಂಡು ನೋವನ್ನು ನುಂಗಿ ದೇಶ, ಮನೆ, ಸಮಾಜಕ್ಕೆ ಪ್ರೇರಕ ಶಕ್ತಿಯಾಗಿ ದುಡಿಯುವ ಶಕ್ತಿ (will power) ಮನಃಶಕ್ತಿ ಅಗ್ನಿಯಿಂದ ಕೊಡಲ್ಪಟ್ಟಿದೆ ಎನ್ನುವರು.

ಈ ಶಕ್ತಿಯನ್ನು ಸ್ತ್ರೀಯರಾದ ನಾವು ಉಳಿಸಿ ಬೆಳಸಬೇಕು. ಸಹಕಾರ, ಸಮ್ಮತಿ, ಸಹಬಾಳ್ವೆಯಿಂದ ಸ್ತ್ರೀ ಶಕ್ತಿಯನ್ನು ಹೆಚ್ಚಿಸುವ ದಿಶೆಯಲ್ಲಿ ಪುರುಷರ ಸಹಕಾರ ಅಗಾಧವಾಗಿದೆ ಎನ್ನುವುದನ್ನು ತಮ್ಮ ಸಮಾರೋಪ ಭಾಷಣದಲ್ಲಿ ಸ್ಮರಿಸಿಕೊಂಡರು.

ಸ್ತ್ರೀ ಪುರುಷರಿಗೆ ತಾತ್ವಿಕ ವ್ಯತ್ಯಾಸವಿಲ್ಲ. ಸ್ತ್ರೀ ಪುರುಷರು ಒಂದು ಬಟಾಣಿಯ 2 ಭಾಗವಿದ್ದ ಹಾಗೆ. ವಿವೇಕಾನಂದರು ಹೇಳಿದಂತೆ ಪತ್ನಿಯು ಅರ್ಧಾಂಗಿ (better half).

ಮಾನ್ಯ ಪ್ರಧಾನಿ ನರೇಂದ್ರಮೋದಿಯವರು ಸ್ತ್ರೀಗೆ ಅತಿ ಗೌರವಯುತ ಸ್ಥಾನ ನೀಡಿ ಸ್ತ್ರೀಯರ ಏಳಿಗೆಗೆ ಸಹಕಾರ ನೀಡುತ್ತಿದ್ದಾರೆ.

ಈ ಸಂದರ್ಭದಲ್ಲಿ ಸಮ್ಮೇಳನದ ಅಂಗವಾಗಿ ಭಾರತದ ಮಹಿಳಾ ಸಾಧಕಿಯರ ಪರಿಚಯಾತ್ಮಕ ಪ್ರದರ್ಶಿಸಿ, ರಾಷ್ಟ್ರೀಯ ಸಾಹಿತ್ಯ ಮಳಿಗೆ, ವನವಾಸಿ ಗೋ ಉತ್ಪನ್ನ ಹಾಗೂ ಸ್ವದೇಶೀ ಮಳಿಗೆಗಳು, ಪರ್ಯಾವರಣ ಸಂರಕ್ಷಣೆ ಮೊದಲಾದ ಪ್ರದರ್ಶಿನಿಯನ್ನು ಏರ್ಪಡಿಸಲಾಗಿತ್ತು.

'ನಾರೀಶಕ್ತಿ' ಸಮ್ಮೇಳನ ಯಶಸ್ವಿಯಾಗಿ ನಡೆದಿದ್ದು ನಮ್ಮೆಲ್ಲರಿಗೂ ತುಂಬ ಹರ್ಷ ತಂದಿದೆ.

1. ಭಾರತದ ಎಲ್ಲ ರಾಜ್ಯಗಳಲ್ಲಿಯೂ ನಾರೀಶಕ್ತಿ ಸಮ್ಮೇಳನ ನಡೆದಿದೆ. ಇಡೀ ದೇಶದಲ್ಲಿ 480 ಸಮ್ಮೇಳನ ನಡೆದಿದೆ. 11 ಶ್ರೇಣಿಗಳಲ್ಲಿನ ಪ್ರತಿನಿಧಿಗಳು ಎಲ್ಲಾ ಸಮ್ಮೇಳನದಲ್ಲಿ ಭಾಗವಹಿಸಿದ್ದರು. ವಿಶೇಷವಾಗಿ ನಮ್ಮ ಕರ್ನಾಟಕದ 28, ಕಡೆ ಹೊಯ್ಸಳ ಪ್ರಾಂತದಲ್ಲಿ 14 ಕಡೆ ನಡೆದಿದೆ.

2. ಹರ್ಷದ ಗುಂಗಿನಲ್ಲಿಯೇ ನಾವು ಉಳಿದರೆ ಸಮ್ಮೇಳನದ ಉದ್ದೇಶ ಈಡೇರುವುದಿಲ್ಲ. ಭಾಗವಹಿಸಿದ ಪ್ರತಿನಿಧಿಗಳು ಸಮಾಜ ಆಧಾರಿತ ಚಟುವಟಿಕೆಗಳಲ್ಲಿ ಭಾಗವಹಿಸಬೇಕು. ಇದಕ್ಕಾಗಿ ಕೆಲವು ಗಂಟೆಗಳ ಸಮಯವನ್ನು ಮೀಸಲಿಡಬೇಕು. ತನ್ಮೂಲಕ ರಾಷ್ಟ್ರೀಯ ಕಾರ್ಯದಲ್ಲಿ ತೊಡಗಿಸಿದರೆ, ನಾರೀಶಕ್ತಿಯ ಸಾಮರ್ಥ್ಯ ಉತ್ತುಂಗಕ್ಕೇರಿ ಭಾರತ ವಿಶ್ವಗುರುವಾಗುವ ನಿಟ್ಟಿನಲ್ಲಿ ಕೈ ಜೋಡಿಸಿದ ಹೆಮ್ಮೆ ನಮ್ಮದಾಗುತ್ತದೆ. ಎಲ್ಲ ಭಗಿನಿಯರಿಗೂ ವಂದನೆಗಳು. ●

# ಬೀದರ್ ಜಿಲ್ಲೆಯಲ್ಲಿ ಎನ್‌ಇಪಿ ಸಹಿ ಸಂಗ್ರಹ ಅಭಿಯಾನ

ರಾಜ್ಯದಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿ 2020 ಅನ್ನು ಮುಂದುವರಿಸಲು ಒತ್ತಾಯಿಸಿ, ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದಿಂದ ಬೀದರ್‌ನಲ್ಲಿ ಶುಕ್ರವಾರ ಸಹಿ ಸಂಗ್ರಹಿಸಲಾಯಿತು. ಸಂಘದ ಪದಾಧಿಕಾರಿಗಳು ನಗರದ ಅರುಣೋದಯ ಪ್ರಾಥಮಿಕ ಮತ್ತು ಪ್ರೌಢಶಾಲೆಯಲ್ಲಿ ಪಾಲಕರ ಸಹಿ ಸಂಗ್ರಹ ಮಾಡಿದರು. ರಾಷ್ಟ್ರೀಯ ಶಿಕ್ಷಣ ನೀತಿ–2020 ದೇಶದ ಮೂರನೇ ರಾಷ್ಟ್ರೀಯ ಶಿಕ್ಷಣ ನೀತಿಯಾಗಿದೆ. ವ್ಯಾಪಕ ಚರ್ಚೆ ನಂತರ ರೂಪುಗೊಂಡಿದೆ. ವಿದ್ಯಾರ್ಥಿಗಳ ಹಿತ ಅಡಗಿರುವ ಕಾರಣ ರಾಜ್ಯದಲ್ಲಿ ಇದನ್ನು ಯಾವುದೇ ಕಾರಣಕ್ಕೂ ರದ್ದುಪಡಿಸದೆ, ಮುಂದುವರಿಸಬೇಕು ಎಂದು ಒತ್ತಾಯಿಸಿದರು. ಸಂಘದ ಪ್ರಮುಖರಾದ ಬಸವರಾಜ ಸ್ವಾಮಿ, ರಾಜಶೇಖರ ಮಂಗಲಗಿ, ಪರಮೇಶ್ವರ ಬಿರಾದಾರ, ಸಂತೋಷಕುಮಾರ ಮಂಗಳೂರೆ, ಬಸವರಾಜ ಮುಗುಟಾಪುರೆ, ಈಶ್ವರಿ ಬೇಲೂರೆ, ಪಲ್ಲವಿ ಜೋಶಿ ಮತ್ತಿತರರು ಇದ್ದರು.

# ಟ್ರಿಲಿಯನ್ ಡಾಲರ್ ಮೈಲಿಗಲ್ಲು ದಾಟಿದ ಭಾರತ

ಹಲವಾರು ಕ್ಷೇತ್ರಗಳಲ್ಲಿ ನಿರಂತರ ಪ್ರಯತ್ನಗಳಿಂದ ಭಾರತವು ಗಮನಾರ್ಹ ಸಾಧನೆ ಮಾಡಿದ್ದು, ಜಿಡಿಪಿಯಲ್ಲಿ ಐತಿಹಾಸಿಕ ಏರಿಕೆಗೆ ಕಾರಣವಾಗಿದೆ. ಇದರ ಪ್ರತಿಫಲವಾಗಿ ಭಾರತವು ಇದೇ ಮೊದಲ ಬಾರಿಗೆ ಜಿಡಿಪಿಯಲ್ಲಿ 4 ಟ್ರಿಲಿಯನ್ ಡಾಲರ್ ಮಟ್ಟವನ್ನು ದಾಟಿದೆ ಎಂದು ಮಾಧ್ಯಮ ವರದಿಗಳು ತಿಳಿಸಿವೆ. 2027 ವೇಳೆಗೆ ಭಾರತವು ಜಪಾನ್ ಮತ್ತು ಜರ್ಮನಿಯನ್ನು ಹಿಂದಿಕ್ಕಿ ವಿಶ್ವದ ಮೂರನೇ ಅತಿದೊಡ್ಡ ಆರ್ಥಿಕತೆಯಾಗಿ ಹೊರಹೊಮ್ಮುವ ನಿರೀಕ್ಷೆಯಿದೆ.

# 22.23 ಲಕ್ಷ ದೀಪಗಳನ್ನು ಬೆಳಗಿ ವಿಶ್ವದಾಖಲೆ ಬರೆದ ಅಯೋಧ್ಯೆ ದೀಪೋತ್ಸವ

ರಾಮ ಜನ್ಮಭೂಮಿ ಅಯೋಧ್ಯೆಯು ದೀಪಾವಳಿಯಂದು ದೀಪಗಳಿಂದ ಮಿಂದೆದ್ದಿತು. ಈ ಮೂಲಕ ಭವ್ಯವಾದ ದೀಪೋತ್ಸವ ಆಚರಣೆಗೂ ಸಾಕ್ಷಿಯಾಯಿತು. ಇಲ್ಲಿನ ಘಾಟ್ಗಳಲ್ಲಿ ಲಕ್ಷಗಟ್ಟಲೆ ಮಣ್ಣಿನ ದೀಪ ಬೆಳಗಿಸುವ ಮೂಲಕ ಸರಯೂ ನದಿಯ ದಂಡೆಯ ಮೇಲಿರುವ ದೇವಾಲಯ ನಗರವು ತನ್ನದೇ ಆದ ವಿಶ್ವ ದಾಖಲೆಗೆ ಸಾಕ್ಷಿಯಾಯಿತು. ರಾಮ್ ಕಿ ಪೈಡಿ ಸೇರಿ ಅಯೋಧ್ಯೆಯ 51 ಘಾಟ್‌ಗಳಲ್ಲಿ 22,23000 ದೀಪಗಳನ್ನು ಬೆಳಗಿಸುವ ಮೂಲಕ ಉತ್ತರ ಪ್ರದೇಶ ಸರ್ಕಾರ 6ನೇ ಗಿನ್ನೆಸ್ ವಿಶ್ವದಾಖಲೆ ಬರೆದಿದೆ. 2022ರಲ್ಲಿ ದೀಪೋತ್ಸವ ಆಚರಣೆಯ ಸಮಯದಲ್ಲಿ ಸರ್ಕಾರವು 16 ಲಕ್ಷ ದೀಪಗಳನ್ನು ಬೆಳಗಿಸಿ ಗಿನ್ನೆಸ್ ದಾಖಲೆ ಸೃಷ್ಟಿಸಿತ್ತು. ದೀಪೋತ್ಸವ ಮೆರವಣಿಗೆಯು ಭಗವಾನ್ ರಾಮನ ಸಾರವನ್ನು ಚಿತ್ರಿಸುವ 18 ವಿಸ್ಮಯ ಸ್ಫೂರ್ತಿದಾಯಕ ಮತ್ತು ದೈವಿಕ ಸ್ತಬ್ಧಚಿತ್ರಗಳನ್ನು ಪ್ರದರ್ಶಿಸಿತು.

# ಎನ್‌ಇಪಿ–ಕೋಟಿ ಸಹಿ ಸಂಗ್ರಹ ಅಭಿಯಾನ

ಕರ್ನಾಟಕದಲ್ಲಿ ಕಾಂಗ್ರೆಸ್ ಸರಕಾರ ರಾಷ್ಟ್ರೀಯ ಶಿಕ್ಷಣ ನೀತಿ–2020 ಕ್ಕೆ ಪರ್ಯಾಯವಾಗಿ ರಾಜ್ಯ ಶಿಕ್ಷಣ ನೀತಿ ಜಾರಿಗೆ ಮುಂದಾಗಿರುವ ಹಿನ್ನೆಲೆಯಲ್ಲಿ ಎನ್‌ಇಪಿ ಯನ್ನು ಬೆಂಬಲಿಸಿ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ ರಾಜ್ಯಾದಂತ ಕೋಟಿ ಸಹಿ ಸಂಗ್ರಹ ಅಭಿಯಾನ ಪ್ರಾರಂಭಿಸಿದೆ. ದೇಶದ ಪರಂಪರೆ, ಅಗತ್ಯತೆ ಮತ್ತು ಆಸಕ್ತಿಗಳ ಹಿನ್ನಲೆಯೊಂದಿಗೆ ಮುಂದಿನ 20 ವರ್ಷಗಳ ಶಿಕ್ಷಣ ಕ್ಷೇತ್ರದಲ್ಲಿ ಆಗಬಹುದಾದ ಬದಲಾವಣೆ ಹಾಗೂ ಸುಧಾರಣೆಗಳನ್ನು ಗಮನದಲ್ಲಿರಿಸಿಕೊಂಡು ಎನ್‌ಇಪಿಯನ್ನು ಜಾರಿಗೊಳಿಸಲಾಗಿದೆ. ಇದು ದೇಶದ ಶಿಕ್ಷಣಕ್ಕೊಂದು ದೃಷ್ಟಿ ಮತ್ತು ದಿಕ್ಕನ್ನು ನೀಡಬೇಕೆಂಬ ರಾಷ್ಟ್ರೀಯ ಕಾಳಜಿಯೊಂದಿಗೆ ಸರ್ವ ಸಮನ್ವಯಾತ್ಮಕ ಹಾಗೂ ಸಮಗ್ರ ಶಿಕ್ಷಣ ನೀತಿಯಾಗಿದೆ. ಆದರೆ ಈ ಶಿಕ್ಷಣ ನೀತಿಯನ್ನು ವಿರೋಧಿಸುತ್ತಿರುವ ಕಾಂಗ್ರೆಸ್ ಮಾತ್ರ ಕರ್ನಾಟಕದಲ್ಲಿ ಅದನ್ನು ತಿರಸ್ಕರಿಸಿ ಹೊಸದಾಗಿ ರಾಜ್ಯ ಶಿಕ್ಷಣ ನೀತಿ ಜಾರಿಗೆ ತರಲು ಮುಂದಾಗಿದೆ. ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ ಎನ್‌ಇಪಿಯನ್ನು ರದ್ದುಪಡಿಸದಂತೆ ಆಗ್ರಹಿಸಿ ರಾಜ್ಯಾದಂತ ಸಹಿ ಸಂಗ್ರಹ ಅಭಿಯಾನ ಹಮ್ಮಿಕೊಂಡಿದೆ.

ರಾಜ್ಯದ ನೂರಾರು ಶಿಕ್ಷಣ ತಜ್ಞರು, ಮಾಜಿ ಕುಲಪತಿಗಳು, ಆಡಳಿತ ಮಂಡಳಿ ಸದಸ್ಯರು ಈ ಅಭಿಯಾನದ ನೇತೃತ್ವ ವಹಿಸಿದ್ದಾರೆ. ಶಾಲೆ, ಕಾಲೇಜ್, ವಿಶ್ವವಿದ್ಯಾಲಯಗಳ ಕ್ಯಾಂಪಸ್ ಸಹಿತ ಜನರು ಸೇರುವಂತಹ ಸ್ಥಳಗಳಲ್ಲಿ ಕ್ಲಾಸ್ ಹಾಗೂ ಮಾಸ್ ಮಾದರಿಯಲ್ಲಿ ಸಹಿ ಸಂಗ್ರಹ ಮಾಡಲಾಗುತ್ತಿದೆ. ವಿದ್ಯಾರ್ಥಿಗಳು, ಶಿಕ್ಷಕರು, ಶಿಕ್ಷಕೇತರ ಸಿಬ್ಬಂದಿ, ಪೋಷಕರು ಹಾಗೂ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವ ಮೂಲಕ ಎನ್‌ಇಪಿಗೆ ಬೆಂಬಲವಾಗಿ ನಿರ್ದಿಷ್ಟ ನಮೂನೆಯಲ್ಲಿ ಸಹಿ ಪಡೆಯಲಾಗುತ್ತಿದೆ. 10,000 ಕ್ಕೂ ಹೆಚ್ಚು ಶಿಕ್ಷಕರು ಈ ಅಭಿಯಾನದಲ್ಲಿ ತೊಡಗಿದ್ದಾರೆ.

**ಸಂದೀಪ ಬೂದಿಹಾಳ,** ರಾಜ್ಯ ಅಧ್ಯಕ್ಷರು, ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ



MAG(3)/NPP/23/2020-21 Registered No. RNI 45459/85 Posted at Bangalore PSO Bangalore -560 026
Date of Publishing : 17-12-2023 Date of Posting 20th or 21st of every month Posted at Periodical Rate

# "ಪಿಯು ಶಿಕ್ಷಣದ ಅಸ್ಮಿತೆ ಉಳಿಸಿ" ಇಲಾಖೆಗಳ ವಿಲೀನ : ಪ್ರಾಂಶುಪಾಲರು, ಉಪನ್ಯಾಸಕರು, ಸಿಬ್ಬಂದಿಗಳ ಪ್ರತಿಭಟನೆ






ಪದವಿ ಪೂರ್ವ ಶಿಕ್ಷಣ ಇಲಾಖೆಯನ್ನು ಜಿಲ್ಲಾ ಪಂಚಾಯತ್ ಉಸ್ತುವಾರಿಗೆ ವಹಿಸಿದ ಬಗ್ಗೆ ವಿರೋಧಿಸಿ, ಪರೀಕ್ಷಾ ವಿಭಾಗವನ್ನು ಪುನಃ ಪಿಯು ಇಲಾಖೆಗೆ ವರ್ಗಾಯಿಸಲು, ಎರಡನೇ ಪೂರಕ ಪರೀಕ್ಷೆ ರದ್ದುಗೊಳಿಸಲು ಮತ್ತು ಶಾಲಾ ಶಿಕ್ಷಣ (ಪದವಿ ಪೂರ್ವ ಶಿಕ್ಷಣ) ಹೆಸರು ಕೈಬಿಟ್ಟು ಮೊದಲಿನಂತೆ ಪದವಿ ಪೂರ್ವ ಶಿಕ್ಷಣ ಇಲಾಖೆ ಎಂದು ಮುಂದುವರೆಸಲು ಒತ್ತಾಯಿಸಿ ದಿನಾಂಕ 1-12-2023 ರಂದು ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ನಡೆದ ಧರಣಿ ಸತ್ಯಾಗ್ರಹದಲ್ಲಿ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ ಅಧ್ಯಕ್ಷರಾದ ಸಂದೀಪ ಬೂದಿಹಾಳ ಹಾಗೂ ಕಾರ್ಯಾಧ್ಯಕ್ಷರಾದ ಅರುಣ ಶಹಾಪುರ ಮತ್ತು ಪ್ರಮುಖರು ಭಾಗವಹಿಸಿದ್ದರು.

ಬಿ.ಎಂ.ಎಸ್ ಇಂಜಿನಿಯರಿಂಗ್ ಕಾಲೇಜಿನಲ್ಲಿ ನಡೆದ "ನಾರಿಶಕ್ತಿ" ಸಮ್ಮೇಳನ





## ಗಮನಿಸಿ

ಕಾರ್ಯಕ್ರಮ ಮತ್ತು ಚಿತ್ರದ ವರದಿಗಳನ್ನು, ಕಾರ್ಯಕ್ರಮ ನಡೆಸಿದ ತಕ್ಷಣವೇ ಕಳುಹಿಸಿ ಕೊಡಿ. ನಿಮ್ಮ ಯಾವುದೇ ಬರಹಗಳು, ವರದಿಗಳನ್ನು 'ನುಡಿ'ಯಲ್ಲಿ ಕಂಪೋಸಿಂಗ್ ಮಾಡಿ ಫೋಟೋ ಸಹಿತ

**akss1950@gmail.com**

ಇ-ಮೇಲ್‌ಗೆ ಕಳುಹಿಸಿಕೊಡಿ

## ಶಿಕ್ಷಕ ಸಮಾಚಾರ ತರಿಸಲು ಇಲಾಖೆಯ ಆದೇಶ

D.P.I. (Special) ಅವರ ಆದೇಶ ಸಂಖ್ಯೆ T3-LBS-RKM-7/79-80 ದಿನಾಂಕ 20-6-1980ರ ಪ್ರಕಾರ ರಾಜ್ಯದ ಎಲ್ಲಾ ಪ್ರಾಥಮಿಕ ಶಾಲೆಗಳು, ಹೈಸ್ಕೂಲುಗಳು, ಜ್ಯೂನಿಯರ್ ಕಾಲೇಜುಗಳು ಮತ್ತು ಶಿಕ್ಷಕರ ತರಬೇತಿ ಸಂಸ್ಥೆಗಳು (I.T.I.) ತಮ್ಮ ವಾಚನಾಲಯ ಅಥವಾ ಪುಸ್ತಕಾಲು ನಿಧಿಯಿಂದ 'ಅಖಿಲ ಕರ್ನಾಟಕ ಶಿಕ್ಷಕ ಸಮಾಚಾರ' ಚಂದಾ ಪಾವತಿ ಮಾಡಬಹುದು.

IF UNDELIVERED PLEASE RETURN TO SENDER

Printed By :
J. M. Joshi
Karnataka Rajya Madhyamika Shikshaka Sangha ®.)
Published By:
J. M. Joshi
Karnataka Rajya Madhyamika Shikshaka Sangha (R.)
Owned By : J. M. Joshi
on behalf of Karnataka Rajya Madhyamika Shikshaka Sangha (R.)

Printed At: Rashtrotthana Mudranalaya,
'Keshava Shilpa', Kempegowda Nagar, Bengaluru -560 019

Published By : Karnataka Rajya Madhyamika Shikshaka Sangha (R.)
# 55, 'Yadavasmurthi', 1st Main, Sheshadripuram, Bengaluru -560 020

Editor : J. M. Joshi, Karnataka Rajya Madhyamika Shikshaka Sangha (R.), Bengaluru -20

srushtidesigns@gmail.com